ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 278 RNI Number : KNKAN/25/A2770 21-10-2026 Wednesday Page 04, Price 2/- suddinimmuru@gmail.com Mob:-8660146563

ಸಂಪುಟ:01 ಸಂಚಿಕೆ:278 ರಾಯಚೂರು 21-10-2026 ಬುಧವಾರ ಪುಟ 04 ಬೆಲೆ ರೂ.2/- Postal Reg Number:RCR/L/RNP/117/2026-28

ವಾಣಿಜ್ಯ ಬಿಕ್ಕಟ್ಟಿನ ನಡುವೆ ಭಾರತಕ್ಕೆ ಆಗಮಿಸಿದ ಅಮೆರಿಕ ವಿದೇಶಾಂಗ ಸಚಿವ ರೂಬಿಯೊ; ಆರ್ಥಿಕ ಸಂಬಂಧಗಳ ಸುಧಾರಣೆಗೆ ಒತ್ತು

ನವದೆಹಲಿ,ಅ.20-

ಶಕ್ತಿ (ಇಂಧನ), ವ್ಯಾಪಾರ ಮತ್ತು ಹೂಡಿಕೆ, ರಕ್ಷಣೆ, ನಿರ್ಣಾಯಕ ತಂತ್ರಜ್ಞಾನಗಳು ಹಾಗೂ ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಕುರಿತು ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ಉದ್ದೇಶದಿಂದ, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಮಂಗಳವಾರ ಭಾರತಕ್ಕೆ ಮೂರು ದಿನಗಳ ಭೇಟಿಯನ್ನು ಆರಂಭಿಸಿದ್ದಾರೆ.

ಈ ವರ್ಷ ರೂಬಿಯೊ ಅವರ ಎರಡನೇ ಭಾರತ ಭೇಟಿ ಇದಾಗಿದ್ದು, ಉಭಯ ದೇಶಗಳ ನಡುವಿನ ಸಂಬಂಧದಲ್ಲಿನ ನಿರಂತರ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಈ ಭೇಟಿ ನಡೆಯುತ್ತಿದೆ. ಮೇ ತಿಂಗಳಲ್ಲಿ ನಡೆದ ತಮ್ಮ ಹಿಂದಿನ ಭೇಟಿಯ ಸಂದರ್ಭದಲ್ಲಿ, ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಮಾತುಕತೆ ನಡೆಸಿದ್ದರು. ಅಲ್ಲದೆ, 'ಕ್ವಾಡ್' ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲೂ ಭಾಗವಹಿಸಿದ್ದರು.

ಅಮೆರಿಕದ ಈ ಉನ್ನತ ರಾಜತಾಂತ್ರಿಕರೊಂದಿಗೆ ದೊಡ್ಡ ಉದ್ಯಮಿಗಳ ನಿಯೋಗವೊಂದು ಆಗಮಿಸಿದ್ದು, ಈ ಭೇಟಿಯು ಭಾರತ- ಅಮೆರಿಕ ಆರ್ಥಿಕ ಸಹ



ಭಾಗಿತ್ವವನ್ನು ಹೆಚ್ಚಿಸುವತ್ತ ಹೆಚ್ಚಿನ ಗಮನಹರಿಸುವ ಸಾಧ್ಯತೆಯಿದೆ.

ಮಂಗಳವಾರದ ಸಭೆಯಲ್ಲಿ, ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ರೂಬಿಯೊ ಅವರು 'ಭಾರತ-ಅಮೆರಿಕ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆ'ಯನ್ನು ಇನ್ನಷ್ಟು ಬಲಪಡಿಸುವ ಮಾರ್ಗಗಳ ಕುರಿತು ಚರ್ಚಿಸುವ ನಿರೀಕ್ಷೆಯಿದೆ.

ಭಾರತದ ಆರ್ಥಿಕ ರಾಜಧಾನಿಯಾಗಿರುವ ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅಮೆರಿಕದ ಈ ಉನ್ನತ ರಾಜತಾಂತ್ರಿಕರು ಆಗಮಿಸಿದ ಬೆನ್ನಲ್ಲೇ, ಭಾರತದಲ್ಲಿರುವ ಅಮೆರಿಕದ ರಾಯಭಾರ ಕಚೇರಿಯು ಸಾಮಾಜಿಕ ಜಾಲತಾಣದಲ್ಲಿ, ಕಾರ್ಯದರ್ಶಿ ರೂಬಿಯೊ, ಮುಂಬೈಗೆ ಸ್ವಾಗತ ಎಂದು ಪೋಸ್ಟ್ ಮಾಡಿದೆ.

ಜೈಶಂಕರ್ ಅವರೊಂದಿಗಿನ ಸಭೆಯಲ್ಲದೆ, ಮುಂಬೈನಲ್ಲಿ ರೂಬಿಯೊ ಅವರು 26/11ರ ಭಯೋತ್ಪಾದಕ ದಾಳಿಯಲ್ಲಿ ಬಲಿಯಾದವರ ಸ್ಮರಣಾರ್ಥ 'ತಾಜ್' ಸ್ಮಾರಕದ ಬಳಿ ಪುಷ್ಪಚಕ್ರ ಅರ್ಪಿಸಿ ಗೌರವ ಸಲ್ಲಿಸಿದರು. ಈ ದಾಳಿಯಲ್ಲಿ ಆರು ಅಮೆರಿಕನ್ ಪ್ರಜೆಗಳು ಸೇರಿದಂತೆ 160ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದರು.

ಅಮೆರಿಕದ ಈ ಉನ್ನತ ರಾಜತಾಂತ್ರಿಕರು, ಅಮೆರಿಕದ ಸ್ವಾತಂತ್ರ್ಯದ 250ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಲಾದ ಕಾರ್ಯಕ್ರಮವೊಂದರಲ್ಲೂ ಭಾಗವಹಿಸಲಿದ್ದಾರೆ.

ಇಂಧನ, ವ್ಯಾಪಾರ ಮತ್ತು ಹೂಡಿಕೆ, ರಕ್ಷಣೆ, ನಿರ್ಣಾಯಕ ಹಾಗೂ ಉದಯೋನ್ಮುಖ ತಂತ್ರಜ್ಞಾನಗಳು ಮತ್ತು ಪರಸ್ಪರ ಆಸಕ್ತಿಯ ಇತರ ಕ್ಷೇತ್ರಗಳನ್ನು ಒಳಗೊಂಡಂತೆ, ದ್ವಿಪಕ್ಷೀಯ

3 ನೇ ಪುಟಕ್ಕೆ

ಪರಿಸರ ಸಂರಕ್ಷಣೆಗೆ ಕವಿಗಳು ತಮ್ಮ ಕವನಗಳ ಮೂಲಕ ಜಾಗೃತಿ ಮೂಡಿಸಲಿ: ಆಯುಕ್ತ ಜುಬೀನ್ ಮೊಹಾಪಾತ್ರ

ರಾಯಚೂರು

ಕವಿಗಳು ತಮ್ಮ ಸಾಹಿತ್ಯ ಮತ್ತು ಕವನಗಳ ಮೂಲಕ ಪರಿಸರ ಸಂರಕ್ಷಣೆ, ಪ್ರಕೃತಿ ಪ್ರೀತಿ ಹಾಗೂ ಸಾಮಾಜಿಕ ಜಾಗೃತಿಯ ಸಂದೇಶವನ್ನು ಜನರಿಗೆ ತಲುಪಿಸಬೇಕು. ನಮ್ಮ ಪರಿಸರವನ್ನು ಕಾಪಾಡುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ಜುಬೀನ್ ಮೊಹಾಪಾತ್ರ ಹೇಳಿದರು.

ರಾಯಚೂರು ಮಹಾನಗರ ಪಾಲಿಕೆ ವತಿಯಿಂದ ನಾಡಹಬ್ಬ ದಸರಾ-2026ರ ಅಂಗವಾಗಿ ನಗರದ ಮಕ್ಕಾ ದರವಾಜಾ ಬಳಿ ಭಾನುವಾರ ಸಂಜೆ ಆಯೋಜಿಸಿದ್ದ ಬಹುಭಾಷಾ ಕವಿಗೋಷ್ಠಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು

ರಾಯಚೂರು ಜಿಲ್ಲೆ ಐತಿಹಾಸಿಕ ಹಿನ್ನೆಲೆ, ಸಾಂಸ್ಕೃತಿಕ ಪರಂಪರೆ ಹಾಗೂ ಸಾಹಿತ್ಯಿಕ ವೈಭವವನ್ನು ಹೊಂದಿದೆ. ದಾಸರ ನಾಡೆಂದೇ ಪ್ರಸಿದ್ಧವಾಗಿರುವ ಈ ಪ್ರದೇಶದ ಇತಿಹಾಸ, ಸಂಸ್ಕೃತಿ ಮತ್ತು ಸಾಹಿತ್ಯದ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಜಿಲ್ಲೆಯ ಕವಿಗಳು ಹಾಗೂ ಸಾಹಿತಿಗಳ ಬಗ್ಗೆ ಅಪಾರ ಗೌರವವಿದ್ದು, ಅವರ ಸಾಹಿತ್ಯಿಕ ಪ್ರತಿಭೆಗೆ ಸೂಕ್ತ ಪ್ರೋತ್ಸಾಹ



ದೊರೆಯಬೇಕು. ಕವಿಗಳು ತಮ್ಮ ರಚನೆಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡುವುದರ ಜೊತೆಗೆ ಪರಿಸರದ ಮಹತ್ವವನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು ಎಂದು ತಿಳಿಸಿದರು.

ಕವಿಗಳು ಪ್ರಕೃತಿ, ನಾಡು, ನೆಲ, ಜಲ, ಮರಗಿಡಗಳು ಹಾಗೂ ಪರಿಸರದ ಸೌಂದರ್ಯವನ್ನು ತಮ್ಮ ಕವನಗಳಲ್ಲಿ ಬಿಂಬಿಸುವ ಮೂಲಕ ಜನರಲ್ಲಿ ಪ್ರಕೃತಿಯ ಬಗ್ಗೆ ಪ್ರೀತಿ ಬೆಳೆಸಬಹುದು. ಪರಿಸರ ಸಂರಕ್ಷಣೆಯ ಕುರಿತು ಜನಜಾಗೃತಿ ಮೂಡಿಸುವಲ್ಲಿ ಸಾಹಿತ್ಯದ ಪಾತ್ರವೂ ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಟ್ಟರು.

ದಸರಾ ಬಹುಭಾಷಾ ಕವಿಗೋಷ್ಠಿ ಜಿಲ್ಲಾಮಟ್ಟದಲ್ಲಿ ನಡೆಯಲಿ: ವಿಜಯ್ ರಾಜೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ವಿಜಯ್ ರಾಜೇಂದ್ರ ಮಾತನಾಡಿ, ರಾಯಚೂರು ಮಹಾನಗರ ಪಾಲಿಕೆಯಿಂದ ಆಯೋಜಿಸಲಾಗುತ್ತಿರುವ ದಸರಾ ಬಹುಭಾಷಾ ಕವಿಗೋಷ್ಠಿಯನ್ನು ಮುಂದಿನ ವರ್ಷಗಳಲ್ಲಿ ಜಿಲ್ಲಾಮಟ್ಟದಲ್ಲಿ ಆಯೋಜಿಸಬೇಕು. ಜಿಲ್ಲೆಯ ವಿವಿಧ ತಾಲೂಕುಗಳ ಕವಿಗಳು, ಸಾಹಿತಿಗಳು ಹಾಗೂ ಯುವ ಬರಹಗಾರರಿಗೆ ಅವಕಾಶ ಕಲ್ಪಿಸುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದರು.

3 ನೇ ಪುಟಕ್ಕೆ

ಕಬ್ಬು ಬೆಳೆಗಾರರ ಸಮಸ್ಯೆ: ರೈತರ ವಿಚಾರದಲ್ಲಿ ರಾಜಕಾರಣ ಮಾಡಲು ಇಷ್ಟವಿಲ್ಲ; ಸರ್ವ ಪಕ್ಷಗಳ ನಿಯೋಗದೊಂದಿಗೆ ಪ್ರಧಾನಿಗಳ ಭೇಟಿ

ಬೆಂಗಳೂರು,ಅ.20-

ಕಬ್ಬು ಬೆಳೆಗಾರರ ವಿಚಾರವಾಗಿ ಪ್ರಧಾನಿಗಳಿಗೆ ಪತ್ರ ಬರೆದಿದ್ದೇನೆ. ಅವರಿಂದ ಪ್ರಯೋಜನವಾಗುವ ಬಗ್ಗೆ ನನಗೆ ವಿಶ್ವಾಸವಿದೆ ಎಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಹೇಳಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು ಕಬ್ಬು ಬೆಳೆಗಾರರ ಹಿತ ಕಾಪಾಡಲು ನಾನು ಪ್ರಯತ್ನ ಪಟ್ಟಿದ್ದೇನೆ. ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ ಅವರು ಪ್ರಯತ್ನ ಪಟ್ಟು, ಕೊನೆಗೆ ಮತ್ತೆ ಕಾಂಗ್ರೆಸ್ ಮೇಲೆ ಹಾಕಿದ್ದಾರೆ. ಕೇಂದ್ರ ಸರ್ಕಾರದ ಬಗ್ಗೆ ಈಗ ಏನು ಮಾತನಾಡುವುದಿಲ್ಲ. ಕಬ್ಬು ಬೆಳೆಗಾರರ ಸಮಸ್ಯೆಯನ್ನು ಎಲ್ಲರೂ ಸೇರಿ ಬಗೆಹರಿಸಬೇಕು ಎಂದು ಹೇಳಿದರು.

ನನಗೆ ಈ ವಿಚಾರವಾಗಿ ರಾಜಕಾರಣ ಮಾಡೋಕೆ ಇಷ್ಟ ಇಲ್ಲ. ರೈತರ ಹತ್ತಿರ ಏನು ರಾಜಕಾರಣ ಮಾಡ್ತೀರ? ರಾಜಕಾರಣ ಮಾಡೋಕೆ ಬೇರೆ ಜನ ಇದ್ದಾರೆ. ಅವರು ಮಾಡುತ್ತಾರೆ. ಅವರು ಟೀಕೆ ಮಾಡುತ್ತಿರಲಿ. ಅದಕ್ಕೆಲ್ಲ ನಾವು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದರು.

ಮುಂದಿನ ವಾರ ಬರದ ವಿಚಾರವಾಗಿ ಪ್ರಧಾನಿಗಳಿಗೆ ಮನವಿಯನ್ನು ಸಲ್ಲಿಸುತ್ತೀರ ಎಂದು ಕೇಳಿದಾಗ, ಹೌದು, ಸರ್ವ ಪಕ್ಷಗಳ ನಿಯೋಗದೊಂದಿಗೆ ಪ್ರಧಾನಿಗಳನ್ನು ಭೇಟಿಯಾಗಿ ಮನವಿಯನ್ನು ಮಾಡುತ್ತೇವೆ. ವಿರೋಧ ಪಕ್ಷದವರೂ ಕೂಡ ನಮ್ಮ ಜೊತೆಗೆ ಬರುತ್ತೇವೆ ಎಂದು ಹೇಳಿದ್ದಾರೆ. ಈಗ

3 ನೇ ಪುಟಕ್ಕೆ

ಕಾಂಗ್ರೆಸ್ ಹುತ್ತದಲ್ಲಿ ಆಗುತ್ತಿರುವ ಬೆಳವಣಿಗೆ ನೋಡ್ತಿದ್ರೆ, ಮೂರನೇ ಸಿಎಂ ಬರಬಹುದು, ನಾಲ್ಕನೇ ಸಿಎಂ ಬರಬಹುದು: ಛಲವಾದಿ ನಾರಾಯಣಸ್ವಾಮಿ

ಬೆಂಗಳೂರು,ಅ.20-

ಕಾಂಗ್ರೆಸ್ ಹುತ್ತದಲ್ಲಿ ಆಗುತ್ತಿರುವ ಬೆಳವಣಿಗೆ ನೋಡುತ್ತಿದ್ದರೆ, ಮೂರನೇ ಸಿಎಂ ಬರಬಹುದು, ನಾಲ್ಕನೇ ಸಿಎಂ ಕೂಡ ಬರಬಹುದು ಎಂದು ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ಮಲ್ಲೇಶ್ವರಂ ಬಿಜೆಪಿ ಕಚೇರಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಕೆಲಸ ಕ್ಯಾಮರಾ ಹಿಡಿದು ಬೆಡ್ ರೂಮ್‌ಗೆ ಹೋಗೋದಲ್ಲ. ಈ ರೀತಿ ಮಾಡೋರು ಪಾಪಿಗಳು, ಕಳ್ಳರು, ಬ್ಲ್ಯಾಕ್‌ಮೇಲರ್ಗಳು. ಇದನ್ನು ಸಿಬಿಐಗೆ ಕೊಡಿ. ಪ್ರಕರಣವನ್ನು ಮುಚ್ಚಿ ಹಾಕುವ ಕೆಲಸ ಮಾಡ್ತಿದ್ದಾರೆ



ಅಂತ ಅನ್ನಿಸುತ್ತಿದೆ. ಇದರಲ್ಲಿ ಯಾರೇ ಭಾಗಿಯಾಗಿದ್ರೂ ಅವರ ವಿರುದ್ಧ ತಕ್ಕ ಕ್ರಮ ಆಗಬೇಕು ಎಂದು ಕಿಡಿಕಾರಿದರು.

ಅನ್ ಫಿಟ್ ಹೋಮ್ ಮಿನಿಸ್ಟ್ರಿ ವಿಷಯದಲ್ಲಿ ಗೃಹ ಸಚಿವರು ಮಾತಾಡಿದ್ರೆ ಸರಿಯಾಗಲ್ಲ. ಆಪಾದನೆಗಳಲ್ಲಿ ಅವರು ಕೂಡ ಒಬ್ಬರು. ಗೃಹ ಖಾತೆ ವಹಿಸಿಕೊಂಡವರು ಬಹಳ ನಿಷ್ಪಕ್ಷಪಾತವಾಗಿ ಇರಬೇಕು. ಕುಮಾರಸ್ವಾಮಿ ಒಂದು ವಿಷಯವನ್ನು ಹೊರಗೆ ತಂದ್ರು. ಅದರ ಬಗ್ಗೆ ತನಿಖೆ ಮಾಡಿಸಿ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ರಾ?.

3 ನೇ ಪುಟಕ್ಕೆ

ಸರಕಾರಿ ನೌಕರರಿಂದ ಸುಪ್ತ ಸಂಗೀತ ಪ್ರತಿಭೆಯನ್ನು ಅನಾವರಣ:ಸರ್ಕಾರಿ ನೌಕರರು ತಮ್ಮ ಕಲಾಸಕ್ತಿಯನ್ನು ಪ್ರಸ್ತುತಪಡಿಸಲು ಇಂತಹ ವೇದಿಕೆ ಅವಶ್ಯ :ಯಂಕಪ್ಪ ಪಿರಂಗಿ

ರಾಯಚೂರು,ಅ.20-

ಸರ್ಕಾರಿ ನೌಕರರು ತಮ್ಮ ವೃತ್ತಿಜೀವನದ ಜವಾಬ್ದಾರಿಗಳ ನಡುವೆಯೂ ಕಲಾಸಕ್ತಿಯನ್ನು ಬೆಳೆಸಿಕೊಳ್ಳಲು ಇಂತಹ ವೇದಿಕೆಗಳು ಅವಶ್ಯ ಎಂದುಕರ್ನಾಟಕ ರಾಜ್ಯ ಸರ್ಕಾರಿ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಹಾಗೂ ಸರ್ಕಾರಿ ನೌಕರರ ಸಂಘದ ರಾಯಚೂರು ಜಿಲ್ಲಾ ಹಿರಿಯ ಉಪಾಧ್ಯಕ್ಷ ಯಂಕಪ್ಪ ಪಿರಂಗಿ ಹೇಳಿದರು.

ನಗರದ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಇದೇ ಮೊದಲ ಬಾರಿಗೆ ದಸರಾ ಹಬ್ಬದ ಪ್ರಯುಕ್ತ ಸರ್ಕಾರಿ ನೌಕರರಲ್ಲಿರುವ



ಸುಪ್ತ ಸಂಗೀತ ಪ್ರತಿಭೆಯನ್ನು ಅನಾವರಣಗೊಳಿಸಲು ವಿ. ರಿಷಿತಾ ಅರ್ಪಿಸುವ ಒಲಿದಂತೆ ಹಾಡುವೆ ಗಾನಲಹರಿ (ಕರೋಕೆ) ಸಂಗೀತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ದ ಅವರು ಅನೇಕ ಸರ್ಕಾರಿ ನೌಕರರಲ್ಲಿ ಉತ್ತಮ ಗಾಯನ ಪ್ರತಿಭೆ ಮತ್ತು ಸಂಗೀತಾಸಕ್ತಿ ಇದ್ದರೂ ಸೂಕ್ತ ವೇದಿಕೆ ಸಿಗದೆ ಎಲೆಮರೆ ಕಾಯಿಯಂತೆಯೇ ಉಳಿದಿದ್ದಾರೆ. ಅಂತಹ ಪ್ರತಿಭೆಗಳನ್ನು ಗುರುತಿಸಿ, ಹೊಸ ಗಾಯಕರನ್ನು ಪರಿಚಯಿಸುವುದೇ ಒಲಿದಂತೆ ಹಾಡುವೆ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ನೌಕರರ ಬಳಗದಿಂದ ಸುಮಾರು 30ಕ್ಕೂ ಹೆಚ್ಚು ಹಾಡುಗಳನ್ನು ಉತ್ತಮವಾಗಿ ಪ್ರಸ್ತುತಪಡಿಸಿರುವುದು ಸಂತಸದ ಸಂಗತಿ. ನೌಕರರ ವೃತ್ತಿಜೀವನದ ಒತ್ತಡದ ನಡುವೆ ಅವರ ಕಲಾಪ್ರತಿಭೆಗೂ ಅವಕಾಶ ಕಲ್ಪಿಸುವುದು ಅಗತ್ಯ. ಈ ನಿಟ್ಟಿನಲ್ಲಿ ವಿ. ರಿಷಿತಾ ಅರ್ಪಿಸಿದ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಮುಂದಿನ ದಿನಗಳಲ್ಲಿಯೂ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ

3 ನೇ ಪುಟಕ್ಕೆ

ನಾಡಿನಾದ್ಯಂತ ಆಯುಧ ಪೂಜೆ, ವಿಜಯದಶಮಿ ಸಂಭ್ರಮ: ಖರೀದಿ ಭರಾಟೆ ಜೋರು

ಬೆಂಗಳೂರು,ಅ.20-

ನಾಡಿನಾದ್ಯಂತ ಇಂದು ಮಂಗಳವಾರ ಆಯುಧ ಪೂಜೆ ಹಾಗೂ ನಾಳೆ ಬುಧವಾರ ವಿಜಯ ದಶಮಿ ಆಚರಿಸಲು ಸಿದ್ಧತೆಗಳು ಪೂರ್ಣಗೊಂಡಿವೆ. ಕೆಲವು ಕಡೆ ಇಂದು ಬೆಳಗ್ಗೆ ಆಯುಧ ಪೂಜೆ ನೆರವೇರಿಸಿ, ಸಂಜೆ ವಿಜಯದಶಮಿ ಸಂಭ್ರಮಾಚರಣೆ ನಡೆಸಲಾಗುತ್ತದೆ.

ನಾಡಿನಾದ್ಯಂತ ವಿವಿಧ ದೇವಸ್ಥಾನಗಳು ಮತ್ತು ಧಾರ್ಮಿಕ ಕೇಂದ್ರಗಳಲ್ಲಿ ನವರಾತ್ರಿ ಆಚರಣೆ ಭಕ್ತಿಭಾವದಿಂದ ನಡೆಯುತ್ತಿದೆ. ಆಯುಧ ಪೂಜೆ ಮತ್ತು ವಿಜಯ ದಶಮಿ ಆಚರಣೆಗೆ ದೇವಸ್ಥಾನಗಳಲ್ಲಿ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ.

ಆಯುಧ ಪೂಜೆಯ ಹಿನ್ನೆಲೆಯಲ್ಲಿ ಸಣ್ಣ ಮತ್ತು ದೊಡ್ಡ



ಕೈಗಾರಿಕೆಗಳು, ಮೆಕ್ಯಾನಿಕ್ ವರ್ಕ್ ಶಾಪ್‌ಗಳು ಹಾಗೂ ಗ್ಯಾರೇಜ್‌ಗಳಲ್ಲಿ ಯಂತ್ರೋಪಕರಣಗಳನ್ನು ಸ್ವಚ್ಛಗೊಳಿಸಿ, ಹೂವಿನ ಹಾರಗಳಿಂದ ಅಲಂಕರಿಸಲು ಸಿದ್ಧತೆ ನಡೆಸಲಾಗುತ್ತಿದೆ. ರೈತರು ತಮ್ಮ ನೇಗಿಲು, ಟ್ರ್ಯಾಕ್ಟರ್ ಪಂಪ್‌ಸೆಟ್ ಹಾಗೂ ನಿತ್ಯ ಬಳಕೆಯ ಇತರ ಕೃಷಿ ಉಪಕರಣಗಳನ್ನು ಪೂಜೆಗೆ ಸಿದ್ಧಪಡಿಸುತ್ತಿದ್ದಾರೆ. ನವರಾತ್ರಿ ಸಂದರ್ಭದಲ್ಲಿ ತಮ್ಮ ವಾಹನಗಳಿಗೂ ಪೂಜೆ ಸಲ್ಲಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ವಿಜಯದಶಮಿಯಂದು ಜ್ಞಾನದ ಅಧಿದೇವತೆಗಳಾದ ಶಾರದಾ ದೇವಿ ಮತ್ತು ಸರಸ್ವತಿ ದೇವಿಯ ಪೂಜೆ ನೆರವೇರಿಸಲು ಶಾಲಾ-ಕಾಲೇಜುಗಳು ಹಾಗೂ ಸಾಂಸ್ಕೃತಿಕ ಕೇಂದ್ರಗಳಲ್ಲಿ ಸಿದ್ಧತೆಗಳು ನಡೆಯುತ್ತಿವೆ. ಕೆಲವು ದೇವಸ್ಥಾನಗಳಲ್ಲಿ ಮಕ್ಕಳ ಔಪಚಾರಿಕ ವಿದ್ಯಾಭ್ಯಾಸದ ಆರಂಭವನ್ನು ಸೂಚಿಸುವ ವಿದ್ಯಾರಂಭ ಸಮಾರಂಭ ಆಯೋಜಿಸಲು ವ್ಯವಸ್ಥೆ ಮಾಡಲಾಗಿದೆ.

ಮಾರುಕಟ್ಟೆಗಳಲ್ಲಿ ಹಬ್ಬದ ಖರೀದಿ ಭರಾಟೆ

ಆಯುಧ ಪೂಜೆಯ ಹಿನ್ನೆಲೆಯಲ್ಲಿ ವಿವಿಧೆಡೆ ಹೂವು ಮತ್ತು ಹಣ್ಣುಗಳ ಮಾರಾಟ ಹೆಚ್ಚಾಗಿದೆ. ಸೇವಂತಿಗೆ, ಮಲ್ಲಿಗೆ, ಚೆಂಡುಹೂವು ಸೇರಿದಂತೆ ವಿವಿಧ ಬಗೆಯ ಹೂವುಗಳು ಮಾರುಕಟ್ಟೆಗಳಲ್ಲಿ ಮಾರಾಟವಾಗುತ್ತಿವೆ. ನಿನ್ನೆ ಬೆಳಗ್ಗೆಯಿಂದಲೇ ವ್ಯಾಪಾರಿಗಳು ಪೂಜಾ ಸಾಮಗ್ರಿಗಳ ಮಾರಾಟ ಆರಂಭಿಸಿದ್ದು, ಗ್ರಾಹಕರು ಪೂಜೆಗೆ ಅಗತ್ಯವಾದ ವಸ್ತುಗಳನ್ನು ಖರೀದಿಸುತ್ತಿರುವುದು ಕಂಡುಬಂದಿದೆ. ಹಬ್ಬದ ಹಿನ್ನೆಲೆಯಲ್ಲಿ ಮಾರುಕಟ್ಟೆಗಳಲ್ಲಿ ವ್ಯಾಪಾರ ಚಟುವಟಿಕೆ

3 ನೇ ಪುಟಕ್ಕೆ

ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆಯುಧ ಪೂಜೆ



ಸಿರವಾರ.ಅ.20-

ತಾಲೂಕಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ಕವಚ 108 ಆಂಬುಲೆನ್ಸ್ ಆಯುಧ ಪೂಜೆ ಪ್ರಯುಕ್ತ 108 ಆಂಬುಲೆನ್ಸ್ ಚಾಲಕರು ಶುಶ್ರೂಷಕರು ಹಾಗೂ ಶುಶ್ರೂಷಕಿಯರು ಸೇರಿ ಪರಸ್ಪರ ಸಿಹಿ ತಿನ್ನಿಸುವ ಮೂಲಕ ಹಬ್ಬವನ್ನು ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸುವರ್ಣ ಕರ್ನಾಟಕ ಆರೋಗ್ಯ ಕವಚ 108 ನೌಕರರ ಸಂಘದ ರಾಜ್ಯ ಸಂಚಾಲಕರಾದ ಯಾಸೀನ್ ಬಿ. ಗಣೇಕಲ್ ರಾಜ್ಯದಂತ ಹಾಗೂ , ಸಿರವಾರ ತಾಲೂಕಿನ ಜನರ ಪ್ರಾಣರಕ್ಷಣೆಗಾಗಿ ನಿರಂತರ ಸೇವೆ ನೀಡುತ್ತಿರುವ ಆರೋಗ್ಯ ಕವಚ 108 ಆಂಬುಲೆನ್ಸ್‌ಗೆ ಭಕ್ತಿಪೂರ್ವಕವಾಗಿ ಆಯುಧ ಪೂಜೆ ಸಲ್ಲಿಸಲಾಯಿತು.

ಒಳ್ಳೆಯದಕ್ಕೆ ಯಾವಾಗಲೂ ಗೆಲುವು ಇದರ ಸಂಕೇತವೇ ವಿಜಯದಶಮಿ. ಶ್ರೀರಾಮನು ರಾವಣನನ್ನು ಕೊಂದಂತೆ, ತಾಯಿ ಚಾಮುಂಡೇಶ್ವರಿಯು

ನಾಲ್ಕೂ ವಿಧಾನ ಪರಿಷತ್ ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳ ಗೆಲುವು ಖಚಿತ: ಎನ್.ರವಿಕುಮಾರ್

ಕಲಬುರಗಿ

ಅ.23ರಂದು ರಾಜ್ಯದ ನಾಲ್ಕು ವಿಧಾನ ಪರಿಷತ್ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದ್ದು, ಅ. 27ರಂದು ಫಲಿತಾಂಶ ಪ್ರಕಟವಾಗಲಿದೆ. ಈ ನಾಲ್ಕೂ ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ಪದವೀಧರ ಹಾಗೂ ಎರಡು ಶಿಕ್ಷಕರ ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ. ನಾಲ್ಕು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿರುವ ಶಶೀಲ್ ನಮೋಶಿ ಅವರು ಐದನೇ ಬಾರಿಗೆ ಸ್ಪರ್ಧಿಸಿದ್ದು, ಈ ಬಾರಿಯೂ ಭರ್ಜರಿ ಗೆಲುವು ಸಾಧಿಸಲಿದ್ದಾರೆ ಎಂದರು.

ರಾಜ್ಯದ 41 ಕ್ಷೇತ್ರಗಳಲ್ಲಿ ಪ್ರವಾಸ ಕೈಗೊಂಡು ಶಿಕ್ಷಕರ ಅಭಿಪ್ರಾಯ ಸಂಗ್ರಹಿಸಿದ್ದೇವೆ. ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಶೇ.80ರಷ್ಟು ಶಿಕ್ಷಕರು ಶಶೀಲ್ ನಮೋಶಿ ಅವರ ಪರವಾಗಿರುವುದು ಕಂಡುಬಂದಿದೆ. ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಶಿಕ್ಷಕರು, ರೈತರು ಹಾಗೂ ಆರೋಗ್ಯ ಕ್ಷೇತ್ರದ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.

ರಾಜ್ಯದಲ್ಲಿ ಒಟ್ಟು 2.84 ಲಕ್ಷ ಹುದ್ದೆಗಳು ಖಾಲಿಯಿದ್ದು, ಶಿಕ್ಷಣ ಕ್ಷೇತ್ರದಲ್ಲಿಯೇ 79,694 ಹುದ್ದೆಗಳು ಖಾಲಿ ಇವೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ 13,599 ಹುದ್ದೆಗಳು



ಭರ್ತಿಯಾಗದೆ ಉಳಿದಿವೆ. ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಬೋಧಕ ಹುದ್ದೆಗಳು ಖಾಲಿಯಿರುವುದರಿಂದ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ. ಕುಲಪತಿಗಳು ಮತ್ತು ಕುಲಸಚಿವರನ್ನು ಹೊರತುಪಡಿಸಿದರೆ, ಹಲವು ಕಡೆಗಳಲ್ಲಿ ಅತಿಥಿ ಉಪನ್ಯಾಸಕರನ್ನೇ ಅವಲಂಬಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

ಕಲ್ಯಾಣ ಕರ್ನಾಟಕ ಭಾಗದ ಜನರನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಕಡೆಗಣಿಸಿದೆ. ಶಿಕ್ಷಣ ಕ್ಷೇತ್ರಕ್ಕೆ ಮೊದಲ ಆದ್ಯತೆ ನೀಡಬೇಕಿದ್ದ ಸರ್ಕಾರ, ಈ ಭಾಗದ ಅಭಿವೃದ್ಧಿಯ ಬಗ್ಗೆ ನಿರ್ಲಕ್ಷ್ಯ ವಹಿಸಿದೆ. ಶೇ.40ರಷ್ಟು ಶಾಲೆಗಳಲ್ಲಿ ಶೌಚಾಲಯ ಸೇರಿದಂತೆ ಮೂಲಸೌಕರ್ಯಗಳ ಕೊರತೆಯಿದೆ. ಶಶೀಲ್ ನಮೋಶಿ ಅವರು ವಿವಿಧ ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ಪರಿಶೀಲಿಸಿದ್ದಾರೆ ಎಂದು ತಿಳಿಸಿದರು.

ಮಹಿಳೆಯರನ್ನು ಕಡೆಗಣಿಸಿರುವ ರಾಜ್ಯ ಸರ್ಕಾರವು ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಸ್ಥಾನ ನೀಡಿಲ್ಲ. ಮಹಿಳಾ ಶಿಕ್ಷಕಿಯರು ಇದೀಗ ಬಿಜೆಪಿಯ ಪರವಾಗಿದ್ದಾರೆ. ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಜಾರಿಗೆ ತರುವುದಾಗಿ ಭರವಸೆ ನೀಡಿದ್ದ ಸರ್ಕಾರ ಅದನ್ನು ಈಡೇರಿಸಿಲ್ಲ. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಹೇಳುತ್ತಿದೆಯೇ ಹೊರತು, ನೇಮಕಾತಿ ಪ್ರಕ್ರಿಯೆ ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಟೀಕಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿಟ್ಟ ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಿದ ಅವರು, ಶೇ. 56ರಷ್ಟು ಮೀಸಲಾತಿ ವಿಚಾರದಲ್ಲಿ ರಾಜ್ಯ ಸರ್ಕಾರ ನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಂಡಿಸುವಲ್ಲಿ ವಿಫಲವಾಗಿದೆ. ಈ ವಿಚಾರ ನ್ಯಾಯಾಲಯದ ವಿಚಾರಣೆಗೆ ಬಂದಾಗ ಸರ್ಕಾರಿ ವಕೀಲರು ರಜೆ ಹಾಕಿದ್ದರು ಎಂದು ದೂರಿದರು.

ಜಾತಿ ಜನಗಣತಿ ನಡೆಸಿದ್ದರೂ ಅದರ ವರದಿಯನ್ನು ಜಾರಿಗೊಳಿಸಿಲ್ಲ. ಹಿಂದುಳಿದ ವರ್ಗಗಳ ಮಕ್ಕಳ ವಿದ್ಯಾರ್ಥಿವೇತನವನ್ನು ಸ್ಥಗಿತಗೊಳಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ರದ್ದುಪಡಿಸಿ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಜಾರಿಗೆ ತರುವುದಾಗಿ ಹೇಳಿದ್ದ ಸರ್ಕಾರ ಅದನ್ನೂ ಜಾರಿಗೆ ತಂದಿಲ್ಲ. ಅತಿಥಿ ಶಿಕ್ಷಕರಿಗೆ ಅನ್ಯಾಯವಾಗುತ್ತಿದ್ದು, ಅವರಿಗೆ ಉದ್ಯೋಗ ಭದ್ರತೆಯೂ ಇಲ್ಲವಾಗಿದೆ ಎಂದು ಹೇಳಿದರು. ಬರಗಾಲದ ಪರಿಸ್ಥಿತಿಯಲ್ಲಿ ರೈತರಿಗೆ ಕೇವಲ 2,500 ರೂ. ನೀಡಲಾಗುತ್ತಿದೆ. ರೈತರಿಗೆ ಅನ್ಯಾಯ ಮಾಡಿರುವ ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೂ ವಂಚನೆ ಮಾಡಿದೆ ಎಂದು ಎನ್. ರವಿಕುಮಾರ್ ವಾಗ್ದಾಳಿ ನಡೆಸಿದರು.

ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಶಶೀಲ್ ನಮೋಶಿ ಮಾತನಾಡಿ, ರಾಜ್ಯದಲ್ಲಿ 73 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಯಾವುದೇ ನೇಮಕಾತಿ ಪ್ರಕ್ರಿಯೆ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ಶೇ. 100ರಷ್ಟು ಭರ್ತಿ ಮಾಡಬೇಕು ಎಂದು ಒತ್ತಾಯಿಸಿದ್ದೇವೆ. ಆದರೆ, ಈವರೆಗೆ ಸರ್ಕಾರ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ. ಇದರಿಂದ ಈ ಭಾಗದ ಶಿಕ್ಷಣ ವ್ಯವಸ್ಥೆ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಂಸದ ಉಮೇಶ್ ಜಾಧವ್, ಶಾಸಕ ಬಸವರಾಜ ಮತ್ತಿಮಡು, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ, ರಾಜಕುಮಾರ ಪಾಟೀಲ್ ತೆಲಕೂರ, ದೊಡ್ಡಪ್ಪಗೌಡ ಪಾಟೀಲ್, ಕೃಷ್ಣ ರೆಡ್ಡಿ, ಬಾಲರಾಜ್ ಗುತ್ತೇದಾರ್ ಹಾಗೂ ಅಶೋಕ್ ಬಗಲಿ ಉಪಸ್ಥಿತರಿದ್ದರು.

ತೊಗರಿಯಲ್ಲಿ ಅಂತರ ಬೆಳೆಯಾಗಿ ಸೂರ್ಯಕಾಂತಿ ಬೆಳೆದು ಯಶಸ್ಸು



ಕಲಬುರಗಿ:

ಅಫಜಲಪುರ ತಾಲೂಕಿನ ಭೋಗನಳ್ಳಿ ಗ್ರಾಮದ ರೈತರ ಹೊಲಗಳಲ್ಲಿ ತೊಗರಿ ಬೆಳೆಯಲ್ಲಿ ಅಂತರ ಬೆಳೆಯಾಗಿ ಬೆಳೆದಿರುವ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ ಆರ್‌ಎಸ್‌ಎಫ್ ಎಚ್-700 ಹೈಬ್ರಿಡ್ ತಳಿಯ ಸೂರ್ಯಕಾಂತಿ ಬೆಳೆಯ ಕ್ಷೇತ್ರೋತ್ಸ ವವನ್ನು ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ ದ ವತಿಯಿಂದ ಪ್ರಗತಿಪರ ರೈತ ಅಬ್ದುಲ್ ಲತೀಫ್ ಪಟೇಲ್ ಅವರ ಹೊಲದಲ್ಲಿ ಆಯೋಜಿಸಲಾಗಿತ್ತು.

ಕ್ಷೇತ್ರೋತ್ಸ ವದಲ್ಲಿ ಮಾತನಾಡಿದ ಕಲಬುರಗಿ ಕೃಷಿ ವಿಜ್ಞಾನ ಕೇಂದ್ರದ ಬೇಸಾಯಶಾಸ್ತ್ರ ವಿಜ್ಞಾನಿ ಡಾ. ಯುಸುಫ್ ಅಲಿ ನಿಂಬರಗಿ, ತೇವಾಂಶದ ಕೊರತೆಯ ನಡುವೆಯೂ ತೊಗರಿ ಬೆಳೆಯಲ್ಲಿ ಅಂತರ ಬೆಳೆಯಾಗಿ ಸೂರ್ಯಕಾಂತಿ ಬೆಳೆದು ರೈತರು ಯಶಸ್ಸು ಸಾಧಿಸಿದ್ದಾರೆ. ರೈತರು ಒಂದೇ ಬೆಳೆಗೆ ಸೀಮಿತರಾಗದೆ ಅಂತರ ಬೆಳೆ ಪದ್ಧತಿಯನ್ನು ಅಳವಡಿಸಿಕೊಂಡು ವಿವಿಧ ಬೆಳೆಗಳನ್ನು ಬೆಳೆಯುವುದರಿಂದ ಆರ್ಥಿಕವಾಗಿ ಹೆಚ್ಚಿನ ಲಾಭ ಪಡೆಯಬಹುದು ಎಂದರು.

ತೊಗರಿಯಲ್ಲಿ ಸೂರ್ಯಕಾಂತಿಯನ್ನು ಅಂತರ ಬೆಳೆಯಾಗಿ ಬೆಳೆಯುವುದರಿಂದ ಕಡಿಮೆ ಅವಧಿಯಲ್ಲಿ ಹೆಚ್ಚುವರಿ ಆದಾಯ ಗಳಿಸಲು ಸಾಧ್ಯವಿದೆ. ಕೃಷಿ ವಿಜ್ಞಾನ ಕೇಂದ್ರದಿಂದ ಇಂತಹ ಹಲವು ತಾಂತ್ರಿಕ ಮಾಹಿತಿಗಳನ್ನು ಪಡೆದು ಕೃಷಿಯಲ್ಲಿ ಅಳವಡಿಸಿಕೊಳ್ಳುವ ಮೂಲಕ ರೈತರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ. ಶ್ರೀನಿವಾಸ ಬಿ.ವಿ. ಮಾತನಾಡಿ, ರೈತರು ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ರಸಗೊಬ್ಬರಗಳನ್ನು ಬಳಸಬೇಕು. ಸಾವಯವ ಗೊಬ್ಬರಗಳ ಬಳಕೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಮಣ್ಣಿನ ಆರೋಗ್ಯ ಕಾಪಾಡಿ ಉತ್ತಮ ಇಳುವರಿ ಪಡೆಯಬಹುದು ಎಂದು ಹೇಳಿದರು. ಭೋಗನಳ್ಳಿ ಗ್ರಾಮದ ರೈತರಾದ ಲತೀಫ್ ಪಟೇಲ್ ಹಾಗೂ ರಿಯಾಝ್ ಪಟೇಲ್ ಅವರು ಯಶಸ್ವಿಯಾಗಿ ಬೆಳೆದಿರುವ ಸೂರ್ಯಕಾಂತಿ ಬೆಳೆಯನ್ನು ಹಲವು ರೈತರು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ರೈತರಾದ ಸಿದ್ದು ಹುಲಿ, ಸುಭಾಷ ಪಾಟೀಲ, ಈರಣ್ಣ ಸುತಾರ್ ಮಹಬೂಬ್ ನದಾಫ್, ಸಿಧನೂರ, ಬೊಗಪ್ಪ ಮಾಂಗ, ರಸೂಲ್ ಪಟೇಲ್ ಸೇರಿದಂತೆ ಹಲವು ರೈತರು ಹಾಗೂ ರೈತ ಮುಖಂಡರು ಭಾಗವಹಿಸಿದ್ದರು.

ವಿವಾದಿತ ಎಸ್‌ಟಿ ಜಾತಿ ಪ್ರಮಾಣಪತ್ರಗಳ ವಿತರಣೆ ಕುರಿತು ತನಿಖೆ ನಡೆಸಲು ಮಹರ್ಷಿ ವಾಲ್ಮೀಕಿ ಸಮಾಜ ಒತ್ತಾಯ

ಚಿತ್ತಾಪುರ:

ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಗಳು ಹಾಗೂ ರಾಜ್ಯ ಸರ್ಕಾರದ ಆದೇಶಗಳಿದ್ದರೂ ವಿವಾದಿತ ಪರಿಶಿಷ್ಟ ಪಂಗಡ (ಎಸ್‌ಟಿ) ಜಾತಿ ಪ್ರಮಾಣಪತ್ರಗಳನ್ನು ವಿತರಿಸಲಾಗುತ್ತಿದೆ ಎಂಬ ಆರೋಪದ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಮಹರ್ಷಿ ವಾಲ್ಮೀಕಿ ಸಮಾಜದ ತಾಲೂಕು ಸಮಿತಿ ಅಧ್ಯಕ್ಷ ಭೀಮರಾವ ದೊರಿ ಅವರ ನೇತೃತ್ವದಲ್ಲಿ ಸಮಾಜದ ಮುಖಂಡರು ತಹಶೀಲ್ದಾರ್ ಮೂಲಕ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಟಿ. ರಘುಮೂರ್ತಿ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಭೀಮರಾವ ದೊರಿ, ಚಿತ್ತಾಪುರ ತಾಲೂಕಿನ ಮಹರ್ಷಿ ವಾಲ್ಮೀಕಿ ಸಮುದಾಯದ ಹಕ್ಕುಗಳು, ಶೈಕ್ಷಣಿಕ ಅವಕಾಶಗಳು, ರಾಜಕೀಯ ಪ್ರಾತಿನಿಧ್ಯ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಸಮಸ್ಯೆಗಳು ಬಹುಕಾಲದಿಂದ ಬಗೆಹರಿಯದೆ ಉಳಿದಿವೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಮಾಜ



ಕಲ್ಯಾಣ ಇಲಾಖೆಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ, ಈವರೆಗೆ ತೃಪ್ತಿಕರವಾದ ಲಿಖಿತ ಉತ್ತರವಾಗಲಿ, ಪರಿಣಾಮಕಾರಿ ಪರಿಹಾರವಾಗಲಿ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿವಾದಿತ ಎಸ್‌ಟಿ ಜಾತಿ ಪ್ರಮಾಣಪತ್ರಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಅನರ್ಹತೆ ಅಥವಾ ವಂಚನೆಯ ಮೂಲಕ ಪ್ರಮಾಣಪತ್ರ ಪಡೆದಿರುವುದು ತನಿಖೆಯಲ್ಲಿ ದೃಢಪಟ್ಟರೆ, ಕಾನೂನುಬದ್ಧ ಪ್ರಕ್ರಿಯೆಯ ಮೂಲಕ ಅವುಗಳನ್ನು ರದ್ದುಪಡಿಸಬೇಕು. ಕರ್ನಾಟಕ ಉಚ್ಚ ನ್ಯಾಯಾಲಯದ ಸಂಬಂಧಿತ ಆದೇಶಗಳು ಹಾಗೂ ರಾಜ್ಯ ಸರ್ಕಾರದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಒತ್ತಾಯಿಸಿದರು.

ಬೇಡಿಕೆ ಈಡೇರದಿದ್ದರೆ ವಾಲ್ಮೀಕಿ ಜಯಂತಿ ಬಹಿಷ್ಕಾರ

ಚಿತ್ತಾಪುರ ಪಟ್ಟಣದ ಪ್ರಜಾಸೌಧದ ಸಭಾಂಗಣದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಲು ಉದ್ದೇಶಿಸಿರುವ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನು ಬಹಿಷ್ಕರಿಸಲು ಮಹರ್ಷಿ ವಾಲ್ಮೀಕಿ ಸಮಾಜದ ಮುಖಂಡರು ನಿರ್ಧರಿಸಿದ್ದಾರೆ.

ಸಮುದಾಯದ ಪ್ರಮುಖ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ತೃಪ್ತಿಕರವಾದ ಲಿಖಿತ ಉತ್ತರ ನೀಡಬೇಕು. ಸಮಸ್ಯೆಗಳ ಪರಿಹಾರಕ್ಕಾಗಿ ಸ್ಪಷ್ಟ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವವರೆಗೆ ತಾಲೂಕು ಆಡಳಿತದ ವತಿಯಿಂದ ಆಯೋಜಿಸಲಾಗುವ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯ ಕ್ರಮವನ್ನು ಶಾಂತಿಯುತವಾಗಿ ಬಹಿಷ್ಕರಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಮಹರ್ಷಿ ವಾಲ್ಮೀಕಿ ಸಮಾಜದ ತಾಲೂಕು ಸಮಿತಿ ಉಪಾಧ್ಯಕ್ಷ ಸುಭಾಷ್ಚಂದ್ರ, ಯುವ ಘಟಕದ ಅಧ್ಯಕ್ಷ ರಾಮಕೃಷ್ಣ ಜಮದಾರ, ಉಮೇಶ ಚಾಮನೂರ, ಭಾಗೇಶ ವೊಗಲಾ, ರಾಜು ಚಿತ್ತಾಪುರ, ಸಾಬಣ್ಣ ಲಾಡ್ಲಾಪುರ ಸೇರಿದಂತೆ ಸಮಾಜದ ಹಲವು ಮುಖಂಡರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬೇಡಿಕೆಗಳ ಈಡೇರಿಕೆ ಭರವಸೆ: ಪ್ರತಿಭಟನೆ ಹಿಂಪಡೆದ ರೈತರು

ಕಲಬುರಗಿ:

ಡಾ. ಎಂ.ಎಸ್. ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಬೆಂಬಲ ಬೆಲೆ ನಿಗದಿಪಡಿಸುವುದು ಹಾಗೂ ಕಬ್ಬಿಗೆ ಪ್ರತಿ ಟನ್‌ಗೆ 5,500 ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದ ಶ್ರೀ ಮಹರ್ಷಿ ವಾಲ್ಮೀಕಿ ವೃತ್ತದ ಸಮೀಪ ಕಳೆದ ಮಂಗಳವಾರದಿಂದ ನಡೆಯುತ್ತಿದ್ದ ರೈತರ ಪ್ರತಿಭಟನೆಯನ್ನು ಸೂಕ್ತ ಕ್ರಮ ಕೈಗೊಳ್ಳುವ ಭರವಸೆಯ ಹಿನ್ನೆಲೆಯಲ್ಲಿ ಏಳನೇ ದಿನಕ್ಕೆ ಹಿಂಪಡೆಯಲಾಯಿತು.



ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಭರವಸೆ ಹಾಗೂ ರೈತರ ಬೇಡಿಕೆಗಳನ್ನು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳುವ ವಿಶ್ವಾಸದ ಹಿನ್ನೆಲೆಯಲ್ಲಿ ರೈತರು ಪ್ರತಿಭಟನೆ ಯನ್ನು ವಾಪಸ್ ಪಡೆದರು. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ಮಹೇಶಗೌಡ ಸುಬೇದಾರ್ ಅವರ ನೇತೃತ್ವದಲ್ಲಿ ರೈತ ಮುಖಂಡರು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅವರಿಗೆ ಮನವಿ ಸಲ್ಲಿಸಿದರು.

ನವೆಂಬರ್ 26ರಂದು ದಿಲ್ಲಿಯಲ್ಲಿ ನಡೆಯಲಿರುವ ಸಭೆಯಲ್ಲಿ ಕಬ್ಬಿನ ದರ ಸೇರಿದಂತೆ ರೈತರ ಪ್ರಮುಖ ಬೇಡಿಕೆಗಳ ಕುರಿತು ನಿರ್ಧಾರ ಕೈಗೊಳ್ಳುವ ನಿರೀಕ್ಷೆಯಿದೆ. ಅಲ್ಲಿ ನಿಗದಿಪಡಿಸುವ ದರವನ್ನು ರಾಜ್ಯದ ಎಲ್ಲ ಸಕ್ಕರೆ ಕಾರ್ಖಾನೆಗಳಿಗೂ ಅನ್ವಯಿಸಬೇಕು ಎಂದು ರೈತ ಮುಖಂಡರು ಆಗ್ರಹಿಸಿದರು.

ಕಬ್ಬಿಗೆ ಪ್ರತಿ ಟನ್‌ಗೆ 5,500, ತೊಗರಿಗೆ ಪ್ರತಿ ಕ್ವಿಂಟಲ್‌ಗೆ 15,000 ಹಾಗೂ ಸಕ್ಕರೆಗೆ ಪ್ರತಿ ಕೆ.ಜಿ.ಗೆ 60 ನಿಗದಿಪಡಿಸಬೇಕು. ಇತರ ಬೆಳೆಗಳಿಗೂ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ವೈಜ್ಞಾನಿಕ ಬೆಲೆ ನೀಡಬೇಕು ಎಂದು ಒತ್ತಾಯಿಸಿದರು.

ರೈತರ ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿ ಇಕ್ರಮ್ ಶರೀಫ್, ಜಿಲ್ಲೆಯಲ್ಲಿ ಬರ ಪರಿಸ್ಥಿತಿ ತೀವ್ರವಾಗಿದ್ದು, ಮಳೆ ಮತ್ತು ನೀರಿನ ಕೊರತೆಯ ಜೊತೆಗೆ ಗೊಬ್ಬರ, ಬೀಜ ಹಾಗೂ ಕೀಟನಾಶಕಗಳ ಬೆಲೆ ಏರಿಕೆಯಿಂದ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ರೈತರ ಉತ್ಪನ್ನಗಳಿಗೆ ಸೂಕ್ತ ಬೆಲೆ ದೊರೆಯದಿರುವುದು ಹಾಗೂ ತೊಗರಿ ಸೇರಿದಂತೆ ವಿವಿಧ ಬೆಳೆಗಳ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದೆ ಎಂದರು. ಈ ಸಂದರ್ಭದಲ್ಲಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಡಿಸಿಪಿ ಶಾಲೂ, ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್, ಜೆಸ್ಕಾಂ ಮುಖ್ಯ ಎಂಜಿನಿಯರ್ ವೆಂಕಟೇಶ್ ಹಾಗೂ ರೈತ ಮುಖಂಡರಾದ ಗುಳ್ಳಪ್ಪಗೌಡ ಪಾಟೀಲ್, ಬಸವರಾಜ ಕೋರಿ, ವಿಜಯಕುಮಾರ ಮುಷ್ಟೂರು, ವೀರೇಶ ದೊಡ್ಡಮನಿ, ಜಗದೀಶ ಪಾಟೀಲ ರಾಜಾಪುರ, ಸಿದ್ದರಾಮ ಪಾಟೀಲ್, ವೀರೇಶ್ ಸಾಹುಕಾರ, ಉಮಾಪತಿ ಪಾಟೀಲ, ರಮೇಶ ಹೂಗಾರ, ಸಿದ್ದು ಎಸ್.ಎಲ್., ಕರೆಪ್ಪ ಕರಗೊಂಡ, ಅಶೋಕ ಹೂಗಾರ, ಪಿಡ್ಡಪ್ಪ ಜಾಲಗಾರ, ಬಸವರಾಜ ಚಾನಕೋಟೆ, ಶರಣಗೌಡ ಮಾಲಿಪಾಟೀಲ, ಸಿದ್ದು ಹಿರೇಮಠ, ಮಹಾನಂದ ಪಡಶೆಟ್ಟಿ ಸೇರಿದಂತೆ ಹಲವು ರೈತರು ಉಪಸ್ಥಿತರಿದ್ದರು.

ಅಕ್ರಮ ಸಾರಾಯಿ ಮಾರಾಟಕ್ಕೆ ಕಡಿವಾಣ ಹಾಕುವಂತೆ ಕರ್ನಾಟಕ ರಕ್ಷಣಾ ವೇದಿಕೆಯಿಂದ ಪ್ರತಿಭಟನೆ



ಯಡ್ರಾಮಿ:

ತಾಲೂಕು ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಕ್ರಮ ಸಾರಾಯಿ ಮಾರಾಟಕ್ಕೆ ಕಡಿವಾಣ ಹಾಕಬೇಕು ಹಾಗೂ ಕಬ್ಬು ಬೆಳೆಗಾರರಿಗೆ ನ್ಯಾಯಯುತ ಬೆಲೆ ನೀಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ಪ್ರವೀಣ್ ಶೆಟ್ಟಿ ಬಣದ ವತಿಯಿಂದ ಸೋಮವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಸರ್ದಾರ್ ಶರಣಗೌಡ ಇನಾಮ್ದಾರ್ ವೃತ್ತದಿಂದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಕರವೇ ಕಾರ್ಯಕರ್ತರು, ಅಕ್ರಮ ಮದ್ಯ ಮಾರಾಟ ತಡೆಗಟ್ಟುವಲ್ಲಿ ಸಂಬಂಧಪಟ್ಟ ಇಲಾಖೆಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ತಾಲೂಕು ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮ ಮದ್ಯ ಮಾರಾಟ ನಡೆಯುತ್ತಿದೆ ಎಂಬ ಆರೋಪಗಳಿದ್ದು, ಇದರಿಂದ ಸಾರ್ವಜನಿಕರ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಯಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಪರಿಶೀಲನೆ ನಡೆಸಿ, ಅಕ್ರಮ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರ ಹಿತದೃಷ್ಟಿಯಿಂದ ಅಕ್ರಮ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ತಡೆಗಟ್ಟಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ವಿಶ್ವನಾಥಗೌಡ ಮಾಗಣಗೇರಾ, ಶಿವಸೇನಾ ತಾಲೂಕು ಅಧ್ಯಕ್ಷ ಭಾಗ್ಯವಂತ ಪರ್ವ, ಮುತ್ತಪ್ಪ ಪೂಜಾರಿ, ನಾಗರಾಜ ದಂಡಗುಲ್ಕರ್ ಬಾಲರಾಜ ಅಗಸರ, ರಾಜಶೇಖರ ಬಂಟನೂರ, ಅಪ್ರೋಜ್ ಆತನೂರ, ಕಾಶಿನಾಥಗೌಡ, ಸಂತೋಷಗೌಡ ಮಾಲಿಪಾಟೀಲ್ ಸೇರಿದಂತೆ ಕರವೇ ಕಾರ್ಯಕರ್ತರು, ಮಹಿಳೆಯರು ಹಾಗೂ ರೈತರು ಪಾಲ್ಗೊಂಡಿದ್ದರು.

ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಶಶೀಲ್ ನಮೋಶಿಗೆ ಗೆಲುವು ಖಚಿತ : ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ

ಬೀದರ್ :

ವಿಧಾನ ಪರಿಷತ್‌ನ ಈಶಾನ್ಯ ಶಿಕ್ಷಕರ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಶಶೀಲ್ ಜಿ. ನಮೋಶಿ ಅವರು ಭಾರಿ ಬಹುಮತದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ವತಿಯಿಂದ ಆಯೋಜಿಸಿದ್ದ ರವಿವಾರ ನಡೆಸಿದ ಜಂಟಿ ಪತ್ರಿಕಾ ಗೋಷ್ಠಿ ಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರವು ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಜಾರಿ ಹಾಗೂ ಅತಿಥಿ ಉಪ 'ನ್ಯಾಸಕರ ಸೇವೆ ಖಾಯಂಗೊಳಿಸುವ ಭರವಸೆಗಳನ್ನು ಈಡೇರಿಸಿಲ್ಲ ಎಂದು ಆರೋಪಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೂಡಲೇ ಒಪಿಎಸ್ ಜಾರಿಗೊಳಿಸುವುದಾಗಿ ಹಾಗೂ ಪದವಿ ಮತ್ತು ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸುವುದಾಗಿ ಭರವಸೆ ನೀಡಿತ್ತು. ಆದರೆ, ಮೂರು ವರ್ಷಗಳಿಗೂ



ಹೆಚ್ಚು ಕಾಲ ಕಳೆದರೂ ಆ ಭರವಸೆಗಳು ಈಡೇರಿಲ್ಲ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಸುಮಾರು 20ರಿಂದ 25 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ರಾಜ್ಯದ ಸುಮಾರು 8,500 ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರು ಹಲವು ತರಗತಿಗಳ ಮಕ್ಕಳಿಗೆ ಪಾಠ ಮಾಡುವ ಪರಿಸ್ಥಿತಿಯಿದೆ ಎಂದು ದೂರಿದರು.

ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್ ಅವರು ಮಾತನಾಡಿ, ಹೆಚ್.ಡಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಶಾಲೆಗಳ ಅಭಿವೃದ್ಧಿ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆಗಳ ಆರಂಭಕ್ಕೆ ಕ್ರಮ ಕೈಗೊಳ್ಳಲಾಗಿತ್ತು. ಆದರೆ, ಈಗಿನ ಸರ್ಕಾರ ಶಿಕ್ಷಕರ ನೇಮಕಾತಿ ಮತ್ತು ಶಾಲಾ ಮೂಲ ಸೌಕರ್ಯ ಅಭಿವೃದ್ಧಿಗೆ ಸಮರ್ಪಕ ಗಮನ ನೀಡುತ್ತಿಲ್ಲ ಎಂದು ದೂರಿದ ಅವರು, ಮುಂದಿನ ಚುನಾವಣೆಗಳಲ್ಲಿಯೂ ಬಿಜೆಪಿ-ಜೆಡಿಎಸ್ ಮೈತ್ರಿ ಮುಂದುವರಿಯಲಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ್ ಪಾಟೀಲ್ ಅವರು ಮಾತನಾಡಿ, ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ-ಜೆಡಿಎಸ್ ಕಾರ್ಯಕರ್ತರು ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಶಿಕ್ಷಕರೊಂದಿಗೆ ಸಂವಾದ ನಡೆಸಿದ್ದಾರೆ. ದಸರಾ ರಜೆಯ ಅವಧಿಯಲ್ಲಿಯೂ ಮತದಾರರ ಮನೆಗಳಿಗೆ ತೆರಳಿ ಪ್ರಚಾರ ನಡೆಸಲಾಗಿದೆ ಎಂದು ತಿಳಿಸಿದರು.

ಮಾಜಿ ವಿಧಾನ ಪರಿಷತ್ ಸಭಾಪತಿ ರಘುನಾಥರಾವ್ ಮಲ್ಕಾಪುರೆ ಅವರು ಮಾತನಾಡಿ, ಕಳೆದ ಎರಡು-ಎರಡೂವರೆ ವರ್ಷಗಳಿಂದ ಕಾಂಗ್ರೆಸ್‌ನವರು ಕುರ್ಚಿಗಾಗಿ ನಡೆಸಿದ ಪ್ರಯತ್ನವನ್ನು ನಾಡಿನ ಸಮಸ್ತ ಜನರ ಸರ್ವಾಂಗೀಣ ಅಭಿವೃದ್ಧಿಗಾಗಿ ಮಾಡಿದ್ದರೆ ಜನರು ನೆಮ್ಮದಿಯಿಂದ ಇರುತ್ತಿದ್ದರು. ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ಮೇಲೂ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಜನರು ನೋಡುತ್ತಿದ್ದಾರೆ ಎಂದು ಟೀಕಿಸಿದರು.

ಈ ಸಂದರ್ಭದಲ್ಲಿ ಮಾಜಿ ಕೇಂದ್ರ ಸಚಿವ ಭಗವಂತ್ ಖುಬಾ, ಬಿಜೆಪಿ ಮುಖಂಡ ಈಶ್ವರ್ ಸಿಂಗ್ ಠಾಕೂರ್, ಮಹಾನಗರ ಪಾಲಿಕೆ ಸದಸ್ಯ ಶಶಿ ಹೊಸಳ್ಳಿ, ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪೀರಪ್ಪ ಔರಾದೆ, ಮಾಧ್ಯಮ ಪ್ರತಿನಿಧಿ ಶ್ರೀನಿವಾಸ್ ಚೌದ್ರಿ, ಜೆಡಿಎಸ್ ಜಿಲ್ಲಾಧ್ಯಕ್ಷ ರಮೇಶ್ ಪಾಟೀಲ್ ಸೋಲಪುರ್, ಪ್ರಧಾನ ಕಾರ್ಯದರ್ಶಿ ಅಶೋಕ್ ಕೋಡಗೆ ಹಾಗೂ ರಾಜಕುಮಾರ್ ಕಡ್ಯಾಳ್ ಸೇರಿದಂತೆ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಆಗಮಿಸಿದ ಅಮೆರಿಕ ವಿದೇಶಾಂಗ ಸಚಿವ ರೂಬಿಯೊ; ಆರ್ಥಿಕ ಸಂಬಂಧಗಳ ಸುಧಾರಣೆಗೆ ಒತ್ತು

ಸಹಕಾರದ ಪ್ರಮುಖ ವಿಷಯಗಳ ಕುರಿತು ಚರ್ಚೆಗಳು ನಡೆಯುವ ನಿರೀಕ್ಷೆಯಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಕಳೆದ ವಾರ ತಿಳಿಸಿದ್ದರು.

ನಾಡಿನಾದ್ಯಂತ ಆಯುಧ ಪೂಜೆ, ವಿಜಯದಶಮಿ ಸಂಭ್ರಮ: ಖರೀದಿ ಭರಾಟೆ ಜೋರು

ಗರಿಗೆದರಿದೆ.

ಬೆಂಗಳೂರಿನ ಕೆ.ಆರ್. ಮಾರ್ಕೆಟ್‌ನಲ್ಲಿ ಪೂಜಾ ಸಾಮಗ್ರಿಗಳ ಖರೀದಿಗೆ ಜನಸಾಗರವೇ ಹರಿದು ಬಂದಿದೆ. ಮಧ್ಯರಾತ್ರಿಯಿಂದಲೇ ಜನರು ಹೂವು, ಹಣ್ಣು, ನಿಂಬೆಹಣ್ಣು, ಕುಂಬಳಕಾಯಿ, ಬಾಳೆಕಂದು ಸೇರಿದಂತೆ ವಿವಿಧ ಪೂಜಾ ವಸ್ತುಗಳನ್ನು ಖರೀದಿಸುತ್ತಿದ್ದಾರೆ. ಬೆಂಗಳೂರಿನ ಸುತ್ತಮುತ್ತಲಿನ ರೈತರಿಂದ ನೇರವಾಗಿ ತಾಜಾ ಹೂವು ಮತ್ತು ಅಗ್ಗದ ದರದಲ್ಲಿ ಸಾಮಗ್ರಿಗಳು ಸಿಗುವ ಕಾರಣಕ್ಕಾಗಿ ಜನರು ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ.

ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆಯುಧ ಪೂಜೆ

ಮಹಿಷಾಸುರನನ್ನು ಕೊಂದಂತೆ, ನಮ್ಮೊಳಗಿನ ದುಷ್ಟ ಭಾವನೆಗಳು, ಅಹಂಕಾರ ಮತ್ತು ಅಸೂಯೆಗಳು ನಾಶವಾಗಿ ಎಲ್ಲರ ಜೀವನದಲ್ಲಿಯೂ ಒಳಿತು, ಶಾಂತಿ ಮತ್ತು ಸಂತೋಷ ನೆಲೆಸಲಿ ಎಂದು ಪ್ರಾರ್ಥಿಸೋಣ

ಶ್ರೀ ದುರ್ಗಾದೇವಿಯ ಅನುಗ್ರಹದಿಂದ ನಮ್ಮ 108 ಆಂಬುಲೆನ್ಸ್ ವಾಹನವು ಯಾವಾಗಲೂ ಸುರಕ್ಷಿತವಾಗಿ ಸಂಚರಿಸಲಿ, ತುರ್ತು ಸೇವೆಯು ಬಿಡದೆ ಮುಂದುವರೆಯಲಿ. ಎಲ್ಲಾ ಚಾಲಕರು ಮತ್ತು ಶುಶ್ರೂಷಕಿಯರಿಗೆ ಶುಶ್ರೂಷಕರು ಉತ್ತಮ ಆರೋಗ್ಯ, ಧೈರ್ಯ, ಶಕ್ತಿ ಹಾಗೂ ಸೇವೆಯಲ್ಲಿ ನಿರಂತರ ಯಶಸ್ಸು ದೊರೆಯಲಿ.

ನಿಮಗೂ ಮತ್ತು ನಿಮ್ಮ ಕುಟುಂಬ ಸದಸ್ಯರಿಗೆಲ್ಲರಿಗೂ ಆಯುಧ ಪೂಜೆ, ವಿಜಯದಶಮಿ ಹಾಗೂ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು ತಿಳಿಸಿದ್ದಾರೆ.

ಸಿರವಾರ ಸಮುದಾಯ ಅರೋಗ್ಯ ಕೇಂದ್ರದ ವೈದ್ಯಧಿಕಾರಿಗಳಾದ ಡಾ:ಮೃತ್ಯುಂಜಯ ಡಾ :ಸುನಿಲ್ ಹಾಗೂ 108 ಆಂಬುಲೆನ್ಸ್ ಸಿಬ್ಬಂದಿ ವರ್ಗದವರು ಮಂಜುನಾಥ್, ಶಿವರಾಜ್,ಸಂತೋಷ, ದುಂಡಪ್ಪ ಅನಿಲ್, ವಿದ್ಯಾ ರಾಣಿ, ಚೌಮಿಯಾ,ಉಷಾ, ಅನಿತಾ, ರಿಯಾಜ್,ಶಾಂತ,ಚಂದ್ರಮ್ಮ.ಚಾಲಕ ಶಿವುಗೇನಿ ಇದರು.

ತಮ್ಮ ಕಲಾಸಕ್ತಿಯನ್ನು ಪ್ರಸ್ತುತಪಡಿಸಲು ಇಂತಹ ವೇದಿಕೆ ಅವಶ್ಯ :ಯಂಕಪ್ಪ ಪಿರಂಗಿ

ನಡೆಸಲು ಉದ್ದೇಶಿಸಲಾಗಿದೆ ಎಂದರು.

ತಾಯರಾಜ್ ಮರ್ಚಟಾಳ ಮಾತನಾಡಿ ಸಂಗೀತ ಮನಸ್ಸಿಗೆ ನೆಮ್ಮದಿ ನೀಡುತ್ತದೆ. ಕಾರ್ಯಕ್ರಮದಲ್ಲಿ ಮಾತನಾಡಿದ ಸಾಹಿತಿ ತಾಯಪ್ಪ ಮರ್ಚಟ್ಹಾಳ್, ಸಂಗೀತವು ಮನುಷ್ಯನ ಮನಸ್ಸಿಗೆ ನೆಮ್ಮದಿ ನೀಡುವುದರ ಜೊತೆಗೆ ದೈನಂದಿನ ಬದುಕಿನ ಒತ್ತಡಗಳನ್ನು ಮರೆಸುವ ಶಕ್ತಿಯನ್ನು ಹೊಂದಿದೆ. ಸರ್ಕಾರಿ ನೌಕರರು ತಮ್ಮ ವೃತ್ತಿಯ ಜವಾಬ್ದಾರಿಗಳ ನಡುವೆಯೂ ತಮ್ಮಲ್ಲಿರುವ ಕಲಾಪ್ರತಿಭೆಯನ್ನು ಬೆಳೆಸಿಕೊಳ್ಳಲು ಇಂತಹ ವೇದಿಕೆಗಳು ಸಹಕಾರಿಯಾಗುತ್ತವೆ ಎಂದು ಹೇಳಿದರು.

ಗಾಯನ ಕ್ಷೇತ್ರದಲ್ಲಿ ಹೊಸದಾಗಿ ಪ್ರಯತ್ನಿಸುವವರು ಆತ್ಮವಿಶ್ವಾಸದಿಂದ ಹಾಡಬೇಕು. ಆರಂಭದಲ್ಲಿ ಸಣ್ಣಪುಟ್ಟ ತಪ್ಪುಗಳಾದರೂ ಹಿಂಜರಿಯದೆ ನಿರಂತರ ಅಭ್ಯಾಸ ಮಾಡಬೇಕು. ಹಾಡಿನ ಸಾಹಿತ್ಯದ ಅರ್ಥ, ಭಾವನೆ ಮತ್ತು ರಾಗದ ಲಯವನ್ನು ಅರಿತು ಹಾಡಲು ಪ್ರಯತ್ನಿಸಬೇಕು. ಇತರರ ಗಾಯನವನ್ನು ಆಲಿಸುವುದರ ಜೊತೆಗೆ ತಮ್ಮದೇ ಆದ ಗಾಯನಶೈಲಿಯನ್ನು ರೂಪಿಸಿಕೊಳ್ಳಬೇಕು. ಪ್ರಶಂಸೆ ಸಿಕ್ಕಾಗ ಹಿಗ್ಗದೆ, ಟೀಕೆಗಳು ಬಂದಾಗ ಕುಗ್ಗದೆ ಸಂಗೀತದ ಮೇಲಿನ ಪ್ರೀತಿಯೊಂದಿಗೆ ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

ಕಲೆಯನ್ನು ಕೇವಲ ಮನರಂಜನೆಯಾಗಿ ನೋಡದೆ, ವ್ಯಕ್ತಿತ್ವ ವಿಕಸನದ ಭಾಗವಾಗಿ ಸ್ವೀಕರಿಸಬೇಕು. ಇಂತಹ ಕಾರ್ಯಕ್ರಮಗಳು ನೌಕರರ ನಡುವೆ ಸ್ನೇಹ, ಸೌಹಾರ್ದ ಮತ್ತು ಸಾಂಸ್ಕೃತಿಕ ಒಡನಾಟವನ್ನು ವೃದ್ಧಿಸುತ್ತವೆ ಎಂದರು.

ಸಾಂಸ್ಕೃತಿಕ ಚಟುವಟಿಕೆಗಳು ವಿಸ್ತರಿಸಲಿ

ಅತಿಥಿ ನಂದೀಶ ಮಾತನಾಡಿ, ಸರ್ಕಾರಿ ನೌಕರರ ದಿನನಿತ್ಯದ ಕಾರ್ಯನಿರತ ಬದುಕಿನ ನಡುವೆ ಇಂತಹ ಸಂಗೀತ ಸಂಜೆಗಳು ಮನಸ್ಸಿಗೆ ಉಲ್ಲಾಸ ನೀಡುತ್ತವೆ. ಪ್ರತಿಯೊಬ್ಬರಲ್ಲಿಯೂ ಒಂದಲ್ಲ ಒಂದು ಪ್ರತಿಭೆ ಅಡಗಿರುತ್ತದೆ. ಅದನ್ನು ಗುರುತಿಸಿ ಹೊರತರುವುದಕ್ಕೆ ಸೂಕ್ತ ವೇದಿಕೆ ಮತ್ತು ಪ್ರೋತ್ಸಾಹ ಅಗತ್ಯ. ಒಲಿದಂತೆ ಹಾಡುವೆ ಕಾರ್ಯಕ್ರಮವು ನೌಕರರಲ್ಲಿನ ಸಂಗೀತಾಸಕ್ತಿಯನ್ನು ಅನಾವರಣಗೊಳಿಸುವ ಉತ್ತಮ ಪ್ರಯತ್ನವಾಗಿದ್ದು, ಇಂತಹ ಸಾಂಸ್ಕೃತಿಕ ಚಟುವಟಿಕೆಗಳು ಇನ್ನಷ್ಟು ವಿಸ್ತರಿಸಲಿ ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ಸುಮಾರು 50 ಮಂದಿ ಭಾಗವಹಿಸಿದ್ದು, ನೌಕರರ ಬಳಗದಿಂದ 30ಕ್ಕೂ ಹೆಚ್ಚು ಹಾಡುಗಳನ್ನು ಪ್ರಸ್ತುತಪಡಿಸಲಾಯಿತು.

ಕಾರ್ಯಕ್ರಮದಲ್ಲಿ ಕೃಷ್ಣಪ್ಪ, ನರಸಿಂಹಲು, ವಸಂತಕುಮಾರ, ಶಿವಮ್ಮ ಆನಂದ, ಸುಖಲತಾ, ರಾಣಿ ಹಾಗೂ ಕಾರ್ಯಕ್ರಮದ ರೂವಾರಿ ಯಂಕಪ್ಪ ಪಿರಂಗಿ ಸೇರಿದಂತೆ ಹಲವರು ಗಾಯನ ಪ್ರಸ್ತುತಪಡಿಸಿ ಸಭಿಕರನ್ನು ರಂಜಿಸಿದರು.

ಗೂಳಪ್ಪ, ಕೃಷ್ಣಪ್ಪ, ರಂಗನಾಥ, ಜಿಂದಪ್ಪ, ಆಂಜನೇಯ, ಸೇರಿದಂತೆ ಇತರರು ಇದ್ದರು.

ಪರಿಸರ ಸಂರಕ್ಷಣೆಗೆ ಕವಿಗಳು ತಮ್ಮ ಕವನಗಳ ಮೂಲಕ ಜಾಗೃತಿ ಮೂಡಿಸಲಿ: ಆಯುಕ್ತ ಜುಬೀನ್ ಮೊಹಾಪಾತ್ರ

ರಾಯಚೂರು ಜಿಲ್ಲೆಯಲ್ಲಿ ಕನ್ನಡದ ಜೊತೆಗೆ ತೆಲುಗು, ಉರ್ದು, ಹಿಂದಿ ಸೇರಿದಂತೆ ವಿವಿಧ ಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ಹೀಗಾಗಿ ಬಹುಭಾಷಾ ಕವಿಗೋಷ್ಠಿಯಲ್ಲಿ ವಿವಿಧ ಭಾಷೆಗಳ ಕವಿಗಳು ಭಾಗವಹಿಸಿದರೆ ಕಾರ್ಯಕ್ರಮ ಇನ್ನಷ್ಟು ಅರ್ಥಪೂರ್ಣವಾಗಲಿದೆ. ಜಿಲ್ಲೆಯ ವಿವಿಧ ಭಾಗಗಳ ಕವಿಗಳಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶ ದೊರೆಯುವುದರ ಜೊತೆಗೆ ಭಾಷಾ ಸೌಹಾರ್ದ ಮತ್ತು ಸಾಂಸ್ಕೃತಿಕ ವಿನಿಮಯಕ್ಕೂ ಸಹಕಾರಿಯಾಗಲಿದೆ ಎಂದರು.

ಕವಿಗೋಷ್ಠಿಯಲ್ಲಿ ಕವಿಗಳು ತಮ್ಮ ಕವನಗಳನ್ನು ವಾಚಿಸಿ ತೆರಳುವುದರಿಂದ ಮಾತ್ರ ಸಾಲದು. ಅವರು ವಾಚಿಸಿದ ಕವನಗಳನ್ನು ಸಂಗ್ರಹಿಸಿ ಸ್ಮರಣ ಸಂಚಿಕೆಯ ರೂಪದಲ್ಲಿ ಪ್ರಕಟಿಸಬೇಕು. ಇದರಿಂದ ಕವಿಗಳ ಸಾಹಿತ್ಯ ಮುಂದಿನ ಪೀಳಿಗೆಗೂ ಉಳಿಯಲಿದೆ. ಅಲ್ಲದೆ, ಕವಿಗಳ ಸಾಹಿತ್ಯ ಸೇವೆಯನ್ನು ಗುರುತಿಸಿ ಗೌರವಧನ ನೀಡುವ ವ್ಯವಸ್ಥೆ ರೂಪಿಸಿದರೆ ಅವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಲಿದೆ ಎಂದು ಹೇಳಿದರು.

ಸಾಹಿತ್ಯ ಪ್ರಚಾರದಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದು:

ಕವಿಗಳು, ಸಾಹಿತಿಗಳು ಹಾಗೂ ಬರಹಗಾರರ ಕೃತಿಗಳನ್ನು ಜನರಿಗೆ ತಲುಪಿಸುವಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದೆ. ಕವನಗಳ ಪ್ರಕಟಣೆ, ಕವನ ಸಂಕಲನ, ಕಥಾ ಸಂಕಲನ ಹಾಗೂ ಕಾದಂಬರಿಗಳ ಬಿಡುಗಡೆ ಕಾರ್ಯಕ್ರಮಗಳಿಗೆ ಪ್ರಚಾರ ನೀಡುವ ಮೂಲಕ ಮಾಧ್ಯಮಗಳು ಸಾಹಿತ್ಯ ಕ್ಷೇತ್ರಕ್ಕೆ ಬೆಂಬಲ ನೀಡುತ್ತಿವೆ ಎಂದು ಪತ್ರಕರ್ತರದ

ಸಿದ್ದಯ್ಯಸ್ವಾಮಿ ತಿಳಿಸಿದರು.

ಕೋವಿಡ್‌ಗೂ ಮುನ್ನ ಪತ್ರಿಕೆಗಳಲ್ಲಿ ಸಾಹಿತ್ಯಿಕ ಪುರವಣಿಗಳು ಹಾಗೂ ವಿಶೇಷ ಸಂಚಿಕೆಗಳಿಗೆ ಹೆಚ್ಚಿನ ಅವಕಾಶವಿತ್ತು. ಆದರೆ ಕೋವಿಡ್ ನಂತರದ ಆರ್ಥಿಕ ಸಂಕಷ್ಟ ಸೇರಿದಂತೆ ವಿವಿಧ ಕಾರಣಗಳಿಂದ ಕೆಲವು ಪತ್ರಿಕೆಗಳಲ್ಲಿ ಸಾಹಿತ್ಯಕ್ಕೆ ಮೀಸಲಾದ ಅವಕಾಶಗಳು ಕಡಿಮೆಯಾಗಿವೆ. ಇದರಿಂದ ಅನೇಕ ಕವಿಗಳಿಗೆ ತಮ್ಮ ಬರಹಗಳನ್ನು ಪ್ರಕಟಿಸಲು ವೇದಿಕೆಯ ಕೊರತೆ ಎದುರಾಗಿದೆ ಎಂದರು.

ಇಂತಹ ಸಂದರ್ಭದಲ್ಲಿ ಕವಿಗಳು ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ತಮ್ಮ ಕವನಗಳನ್ನು ಪ್ರಕಟಿಸುವುದರ ಜೊತೆಗೆ ಸ್ವತಃ ಕವಿತೆಗಳನ್ನು ವಾಚಿಸಿ ವಿಡಿಯೊ ರೂಪದಲ್ಲಿ ಹಂಚಿಕೊಳ್ಳುವುದರಿಂದ ಹೆಚ್ಚಿನ ಓದುಗರನ್ನು ತಲುಪಬಹುದು. ಆಧುನಿಕ ತಂತ್ರಜ್ಞಾನದ ನೆರವಿನಿಂದ ಸ್ಥಳೀಯ ಕವಿಗಳ ಸಾಹಿತ್ಯವನ್ನು ಜಾಗತಿಕ ಮಟ್ಟಕ್ಕೂ ತಲುಪಿಸಲು ಸಾಧ್ಯವಿದೆ ಎಂದು ಹೇಳಿದರು.

ಕವನ ವಾಚನದಿಂದ ಗಮನ ಸೆಳೆದ ಕವಿಗಳು

ಕಾರ್ಯಕ್ರಮದಲ್ಲಿ ಪ್ರಕೃತಿಯ ಸೌಂದರ್ಯ, ಮಲೆನಾಡಿನ ಹಸಿರು ಪರಿಸರ, ಹರಿಯುವ ತೊರೆಗಳು, ಎತ್ತರದ ಮರಗಳು, ಪರ್ವತಗಳು ಹಾಗೂ ಕೃಷಿ ಸಮೃದ್ಧಿಯನ್ನು ಬಿಂಬಿಸುವ ಕವನಗಳನ್ನು ಕವಿಗಳು ವಾಚಿಸಿದರು. ಕವನಗಳ ಮೂಲಕ ನಾಡು, ನೆಲ, ಪ್ರಕೃತಿ ಮತ್ತು ಪರಿಸರದ ಮಹತ್ವವನ್ನು ಅಭಿವ್ಯಕ್ತಪಡಿಸಿದರು. ಬಹುಭಾಷಾ ಸಾಹಿತ್ಯ ಹಾಗೂ ಸಾಂಸ್ಕೃತಿಕ ಅಭಿವ್ಯಕ್ತಿಗೆ ವೇದಿಕೆ ಕಲ್ಪಿಸಿದ ಕಾರ್ಯಕ್ರಮವು ಸ್ಥಳೀಯ ಕವಿಗಳ ಪ್ರತಿಭೆ ಅನಾವರಣಕ್ಕೆ ಅವಕಾಶ ಮಾಡಿಕೊಟ್ಟಿತು.

ಕಾರ್ಯಕ್ರಮದಲ್ಲಿ ಅಂಜಿನಯ್ಯ ಜಾಲಿಬೆಂಚಿ, ವೆಂಕಟರಾವ್ ಕುಲಕರ್ಣಿ, ಸಿದ್ದಯ್ಯ ಸ್ವಾಮಿ, ರಘುನಾಥ ರೆಡ್ಡಿ ಮಂಚಾಲಪುರ, ಮುರಳೀಧರ ಕುಲಕರ್ಣಿ ಸೇರಿದಂತೆ ವಿವಿಧ ಕವಿಗಳು, ಸಾಹಿತಿಗಳು ಹಾಗೂ ಸಾಹಿತ್ಯಾಸಕ್ತರು ಉಪಸ್ಥಿತರಿದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಸಾಹಿತ್ಯದ ಒಲವು ಜನವಾಡಕರ್ ಅವರನ್ನು ಎತ್ತರಕ್ಕೆ ಬೆಳೆಸಿದೆ : ಕುಲಪತಿ ಪ್ರೊ. ಬಿ.ಎಸ್. ಬಿರಾದಾರ್



ಬೀದರ್ :

ಬಾಲ್ಯದಿಂದಲೇ ಸಾಹಿತ್ಯ ರಚನೆಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಹಿರಿಯ ಸಾಹಿತಿ ಡಾ. ಎಸ್.ಎಂ. ಜನವಾಡಕರ್ ಅವರು, ಚಿಕ್ಕ ವಯಸ್ಸಿನಲ್ಲಿಯೇ ಸೋಲ್ಲಾಪುರದ ಸಿದ್ಧರಾಮೇಶ್ವರರ ಕುರಿತು ಕವನ ರಚಿಸಿದ್ದರು. ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಕೊಡುಗೆ ನೀಡಿರುವ ಅವರು ಇಂದು ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನರಾಗಿರುವುದು ಹೆಮ್ಮೆಯ ಸಂಗತಿ ಎಂದು ಬೀದರ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಎಸ್. ಬಿರಾದಾರ್ ಹೇಳಿದರು.

ನಗರದ ಡಾ. ಚನ್ನಬಸವ ಪಟ್ಟದೇವರು ಜಿಲ್ಲಾ ರಂಗಮಂದಿರದಲ್ಲಿ ಜನಪರ ಸಾಂಸ್ಕೃತಿಕ ಪ್ರತಿಷ್ಠಾನ, ಆನಂದ್ ಪ್ರಕಾಶನ, ಭಾರತೀಯ ಬೌದ್ಧ ಧಮ್ಮ ಚಾರಿಟೇಬಲ್ ಟ್ರಸ್ಟ್ ಹಾಗೂ ಡಾ. ಎಸ್.ಎಂ. ಜನವಾಡಕರ್ ಅವರ ಹಿತೈಷಿಗಳು ಮತ್ತು ಬಂಧು ಬಳಗದ ಸಂಯುಕ್ತಾಶ್ರಯದಲ್ಲಿ ರವಿವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯದ ಬಗ್ಗೆ ಬಾಲ್ಯದಲ್ಲೇ ಒಲವು ಹೊಂದಿದ್ದ ಜನವಾಡಕರ್ ಅವರು ತಮ್ಮ ಬರವಣಿಗೆ ಹಾಗೂ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಗುರುತಿಸಿಕೊಂಡಿದ್ದಾರೆ. ಅವರ ಸಾಹಿತ್ಯ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ನೀಡಿರುವುದು ಅವರ ಸಾಧನೆಗೆ ಸಂದ ಮನ್ನಣೆಯಾಗಿದೆ ಎಂದರು.

ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟನ ಅಧ್ಯಕ್ಷ ನಾಡೋಜ ಡಾ. ಬಸವಲಿಂಗ ಪಟ್ಟದೇವರು ಮಾತನಾಡಿ, ಜನವಾಡಕರ್ ಅವರು ಯಾವುದೇ ಪ್ರಚಾರದ ಹಂಗಿಲ್ಲದೆ ಮೌನವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸದ್ದಿಲ್ಲದ ಕ್ರಾಂತಿ ಮಾಡಿದ್ದಾರೆ. ಇಂತಹ ಯೋಗ್ಯ ವ್ಯಕ್ತಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದ ಬೀದರ್ ವಿಶ್ವವಿದ್ಯಾಲಯಕ್ಕೆ ಧನ್ಯವಾದ ಅರ್ಪಿಸುತ್ತೇನೆ. ಅವರ ಸಾಹಿತ್ಯ ಸೇವೆ ಮುಂದಿನ ಪೀಳಿಗೆಗೆ ಪ್ರೇರಣೆಯಾಗಲಿ ಎಂದು ಹಾರೈಸಿದರು.

ಬೀದರ್ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಪ್ರೊ. ಪರಮೇಶ್ವರ ನಾಯಕ್ ಮಾತನಾಡಿ, ಬಸವಣ್ಣನವರ ವಚನದಂತೆ ಮಾತು ಮುತ್ತಿನಂತಿರಬೇಕು. ಜನವಾಡಕರ್ ಅವರು ಯಾರೊಂದಿಗೆ ಮಾತನಾಡಿದರೂ ಶಿಸ್ತುಬದ್ಧವಾಗಿ ಮತ್ತು ಸೌಜನ್ಯದಿಂದ ಮಾತನಾಡುತ್ತಾರೆ. ಅವರ ಸರಳತೆ ಹಾಗೂ ಒಳ್ಳೆಯ ಗುಣಗಳಿಂದಾಗಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಒಳ್ಳೆಯತನವನ್ನು ಬಯಸುವವರಿಗೆ ಯಾವಾಗಲೂ ಒಳ್ಳೆಯದೇ ಆಗುತ್ತದೆ ಎಂದರು.

ಕನ್ನಡ ಪ್ರಾಧ್ಯಾಪಕ ಡಾ. ರಾಮಚಂದ್ರ ಗಣಾಪೂರ ಅಭಿನಂದನಾ ನುಡಿ ಸಲ್ಲಿಸಿ, ಜನವಾಡಕರ್ ಅವರು ಮೃದು ಮನಸ್ಸಿನ ವ್ಯಕ್ತಿಯಾಗಿದ್ದು, ಸಾಹಿತ್ಯ ಕ್ಷೇತ್ರಕ್ಕೆ ಹಲವು ಮಹತ್ವದ ಕೃತಿಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಮಾಸಿದ ಹಾಸಿಗೆ, ಕರುಳಿನ ಕತ್ತರಿ, ಬಾಳಿನ ಬಲೆಚೂರು, ಬೌದ್ಧ ಶ್ರೀ ಬೆಡಗಿನ ಬೀದರ್ ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದಾರೆ. ಅವರ ಸಾಹಿತ್ಯದಲ್ಲಿ ಜೀವನಾನುಭವ, ಮಾನವೀಯ ಮೌಲ್ಯಗಳು ಹಾಗೂ ಸಾಮಾಜಿಕ ಕಳಕಳಿ ಕಾಣಸಿಗುತ್ತವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜನಪರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಚಾಲಕ ಡಾ. ಸಂಜೀವಕುಮಾರ ಅತಿವಾಳೆ ಹಾಗೂ ಸಾಹಿತಿ ಡಾ. ಸುನೀತಾ ಕೂಡ್ಲಿಕರ್ ಮಾತನಾಡಿದರು. ಕೌಠಾ (ಬಿ) ಬಸವ ಯೋಗಾಶ್ರಮದ ಡಾ. ಸಿದ್ದರಾಮ ಶರಣರು ಬೆಲ್ದಾಳ ಸಾನಿಧ್ಯ ವಹಿಸಿದ್ದರು. ಅಣದೂರಿನ ವೈಶಾಲಿನಗರದ ಧಮ್ಮದರ್ಶನ ಭೂಮಿಯ ಭಂತೆ ವರಜ್ಯೋತಿ ಥೇರೋ ಅವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಹಾಲಹಳ್ಳಿಯ (ಕೆ) ದೇವನಾಂ ಪ್ರಿಯ ಪ್ರಿಯದರ್ಶಿ ಬುದ್ಧವಿಹಾರ ಶಾಂತಿಧಾಮದ ಭಂತೆ ಧಮ್ಮದೀಪ ಸಮ್ಮುಖ ವಹಿಸಿದ್ದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಶಿವರಾಜ್ ಹಾಸನಕರ್ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಅಮೃತರಾವ್ ಚಿಮಕೋಡೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ್ ಚನ್ನಶೆಟ್ಟಿ, ಕರ್ನಾಟಕ ಸಾಹಿತ್ಯ ಸಂಘದ ಅಧ್ಯಕ್ಷ ಡಾ. ಜಗನ್ನಾಥ್ ಹೆಬ್ಬಾಳೆ, ಹಿರಿಯ ಮುಖಂಡ ಮಾರುತಿ ಬೌದ್ದೆ, ಬೀದರ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ವಿಠಲದಾಸ್ ಪ್ಯಾಗೆ, ನಿವೃತ್ತ ಪ್ರಾಚಾರ್ಯ ಡಿ. ನಿಜಾಮುದ್ದೀನ್ ಸೇರಿದಂತೆ ಹಲವರು ಇದ್ದರು.

ಅ.24 ರಿಂದ ಬಸವಕಲ್ಯಾಣದಲ್ಲಿ ಕಲ್ಯಾಣ ಪರ್ವ ರಜತ ಮಹೋತ್ಸವ : ಸಿದ್ಧರಾಮೇಶ್ವರ ಸ್ವಾಮೀಜಿ



ಬೀದರ್ :

ವಿಶ್ವಗುರು ಬಸವಣ್ಣನವರ ತತ್ವ-ಸಿದ್ಧಾಂತಗಳು, ವಚನ ಸಾಹಿತ್ಯದ ಸಂದೇಶ ಹಾಗೂ ಶರಣರ ಸಮಾನತೆಯ ಆಶಯಗಳನ್ನು ವಿಶ್ವದೆಲ್ಲೆಡೆ ಪಸರಿಸುವ ಉದ್ದೇಶದಿಂದ ಬಸವ ಧರ್ಮ ಪೀಠ ಹಾಗೂ ಕಲ್ಯಾಣ ಪರ್ವ ಉತ್ಸವ ಸಮಿತಿ ವತಿಯಿಂದ ಅ. 24ರಿಂದ 26ರ ವರೆಗೆ ಬಸವಕಲ್ಯಾಣದಲ್ಲಿ 25ನೇ ವರ್ಷದ ಕಲ್ಯಾಣ ಪರ್ವ ರಜತ ಮಹೋತ್ಸವವನ್ನು ಅದ್ದೂರಿಯಾಗಿ ಆಯೋಜಿಸಲಾಗಿದೆ ಎಂದು ಬಸವಕಲ್ಯಾಣದ ಅಲ್ಲಮಪ್ರಭು ಶೂನ್ಯ ಪೀಠದ ಸಿದ್ಧರಾಮೇಶ್ವರ್ ಸ್ವಾಮೀಜಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಬಸವಕಲ್ಯಾಣದ 108 ಅಡಿ ಎತ್ತರದ ಬಸವಣ್ಣನವರ ಪ್ರತಿಮೆ ಇರುವ ಬಸವ ಮಹಾಮನೆ ಆವರಣದಲ್ಲಿ ಮೂರು ದಿನಗಳ ಕಾಲ ರಾಷ್ಟ್ರಮಟ್ಟದ ಧಾರ್ಮಿಕ, ಸಾಮಾಜಿಕ, ವೈಚಾರಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಲಿಂಗೈಕ್ಯ ಡಾ.ಮಾತೆ ಮಹಾದೇವಿ ಅವರ ನೇತೃತ್ವದಲ್ಲಿ 2001ರಲ್ಲಿ ಆರಂಭವಾದ ಕಲ್ಯಾಣ ಪರ್ವವು 24 ವರ್ಷಗಳನ್ನು ಪೂರೈಸಿ ರಜತ ಮಹೋತ್ಸವದ ಸಂಭ್ರಮದಲ್ಲಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲದೆ ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು, ಗುಜರಾತ್ ಸೇರಿದಂತೆ ವಿವಿಧ ರಾಜ್ಯಗಳಿಂದ ಸಾವಿರಾರು ಶರಣರು, ಬಸವಾಭಿಮಾನಿಗಳು ಹಾಗೂ ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ಕೂಡಲಸಂಗಮದ ಬಸವ ಧರ್ಮ ಪೀಠದ ಪೀಠಾಧ್ಯಕ್ಷೆ ಮಹಾಜಗದ್ಗುರು ಡಾ. ಮಾತೆ ಗಂಗಾದೇವಿ ಅವರ ದಿವ್ಯ ಸಾನ್ನಿಧ್ಯ ವಹಿಸುವರು. ಅ. 24ರಂದು ಬೆಳಿಗ್ಗೆ ಬೆಳಿಗ್ಗೆ 10 ಗಂಟೆಗೆ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಅವರು ರಜತ ಮಹೋತ್ಸವವನ್ನು ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಧ್ವಜಾರೋಹಣ ನೆರವೇರಿಸಲಿದ್ದು, ಶಾಸಕ ಶರಣು ಸಲಗರ ಗೌರವ ಅಧ್ಯಕ್ಷತೆ ವಹಿಸಲಿದ್ದಾರೆ. ಉದ್ಘಾಟನಾ ಸಮಾರಂಭದ ಬಳಿಕ ಧರ್ಮ ಚಿಂತನಗೋಷ್ಠಿ ನಡೆಯಲಿದೆ ಎಂದು ಅವರು ತಿಳಿಸಿದರು.

ಅ.24ರ ಮಧ್ಯಾಹ್ನ 3:30 ಗಂಟೆಯಿಂದ 5:30 ಗಂಟೆವರೆಗೆ ರಾಷ್ಟ್ರೀಯ ಬಸವ ದಳದ ರಾಷ್ಟ್ರೀಯ ಸಮಾವೇಶ ಹಾಗೂ ಸಾಯಂಕಾಲ 12ನೇ ಶತಮಾನದ ಅನುಭವ ಮಂಟಪದಲ್ಲಿ ಮಹಿಳೆಯರ ಸ್ಥಾನ ವಿಷಯ ಕುರಿತು ಮಹಿಳಾ ಗೋಷ್ಠಿ ನಡೆಯಲಿದೆ. ವಿಧಾನ ಪರಿಷತ್ ಉಪಸಭಾಪತಿ ಉಮಾಶ್ರೀ ಗೋಷ್ಠಿಯನ್ನು ಉದ್ಘಾಟಿಸಲಿದ್ದಾರೆ. ನೂತನವಾಗಿ ನಿರ್ಮಿಸಿರುವ ಹರಳಯ್ಯ ಸಮುದಾಯ ಭವನವನ್ನು ಮಾಜಿ ಸಚಿವ ಎಚ್. ಆಂಜನೇಯ ಉದ್ಘಾಟಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸ್ವಾಗತ ಸಮಿತಿಯ ಅಧ್ಯಕ್ಷ ಸೋಮಶೇಖರ್ ಪಾಟೀಲ್ ಗಾದಗಿ ಅವರು ಮಾತನಾಡಿ, ಅ. 26ರಂದು ಬೆಳಿಗ್ಗೆ ಸಾಮೂಹಿಕ ಇಷ್ಟಲಿಂಗ ಪೂಜೆ ಹಾಗೂ ಶರಣ ಸದ್ಭಾವನಾ ಗೋಷ್ಠಿ ನಡೆಯಲಿದೆ. ಬೆಳಿಗ್ಗೆ 10 ಗಂಟೆಗೆ ಬಸವಕಲ್ಯಾಣದ ಕೋಟೆ ಆವರಣದಿಂದ ಬೆಳ್ಳಿ ರಥದಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರ ಹಾಗೂ ವಚನ ಸಾಹಿತ್ಯದ ಭವ್ಯ ಮೆರವಣಿಗೆ ನಡೆಯಲಿದೆ. ಮಧ್ಯಾಹ್ನ 12:30 ಗಂಟೆಗೆ ಸಮಾರೋಪ ಸಮಾರಂಭ ಹಾಗೂ ದಾಸೋಹಿಗಳ ಗೌರವ ಸತ್ಕಾರದೊಂದಿಗೆ ಮೂರು ದಿನಗಳ ಉತ್ಸವ ಸಂಪನ್ನಗೊಳ್ಳಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಮಿತಿಯ ಕಾರ್ಯಾಧ್ಯಕ್ಷ ಜೈರಾಜ್ ಖಂಡ್ರೆ, ರಾಜೇಂದ್ರ ಗಂದಗೆ, ರಾಜೇಂದ್ರ ಜೊನ್ನಿಕೇರಿ, ಚಂದ್ರಶೇಖರ್ ಹೆಬ್ಬಾಳೆ, ಪ್ರಚಾರ ಸಮಿತಿಯ ಅಧ್ಯಕ್ಷ ಶಿವಶರಣಪ್ಪ ಹುಗ್ಗೆ ಪಾಟೀಲ್, ಉತ್ಸವ ಸಮಿತಿಯ ಸಂಜೀವಕುಮಾರ್ ಪಾಟೀಲ್, ಸಮಿತಿಯ ಪ್ರಧಾನ ಕಾರ್ಯದರ್ಶಿ ಸುರೇಶ್ ಸ್ವಾಮಿ, ಬೀದರ್ ಜಿಲ್ಲಾ ಲಿಂಗಾಯತ ಸಮಾಜದ ಅಧ್ಯಕ್ಷ ಕುಶಾಲರಾವ್ ಪಾಟೀಲ್ ಖಾಜಾಪುರ್, ರಾಷ್ಟ್ರೀಯ ಬಸವ ದಳದ ರಾಜ್ಯಾಧ್ಯಕ್ಷ ಕೆ. ವೀರೇಶ್ ಹಾಗೂ ಮಾರ್ಗದರ್ಶಕ ಕಂಟೆಪ್ಪ ಗಂದಿಗುಡಿ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೌನಡಂಗುರ ಕವನ ಸಂಕಲನ ಲೋಕಾರ್ಪಣೆ

ಕಲಬುರಗಿ:

ಚಿತ್ತಾಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕಲಬುರಗಿಯ ಸುವನಾ ಪ್ರಕಾಶನದ ಸಂಯುಕ್ತ ಆಶ್ರಯದಲ್ಲಿ ಚಿತ್ತಾಪುರದ ವರುಣ ನಗರದ ಶ್ರೀ ಶರಣಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಸಾಹಿತಿ, ಚಿತ್ರಕಲಾವಿದ ಉಮೇಶ್ ಬಾಬು ಎಂ. ಸಾಸಾಬಾಳ್ ಅವರ ಮೌನಡಂಗುರ ಕವನ ಸಂಕಲನ ಹಾಗೂ ಭಾವ ಬಂಧುರ, ಭಾವಭೃಂಗ ಗಜಲ್ ಸಂಕಲನಗಳನ್ನು ಲೋಕಾರ್ಪಣೆ ಮಾಡಲಾಯಿತು. ನಾಡೋಜ ಡಾ. ಜೆ.ಎಸ್. ಖಂಡೇರಾವ, ಹಿರಿಯ ಮಕ್ಕಳ ಸಾಹಿತಿ ಎ.ಕೆ. ರಾಮೇಶ್ವರ ಸೇರಿದಂತೆ ಗಣ್ಯರು ಕೃತಿಗಳನ್ನು ಬಿಡುಗಡೆಗೊಳಿಸಿದರು. ಹಿರಿಯ ಮಕ್ಕಳ ಸಾಹಿತಿ ಎ.ಕೆ. ರಾಮೇಶ್ವರ ಮಾತನಾಡಿ, ಉಮೇಶ್ ಬಾಬು ಅವರ ಗಜಲ್‌ಗಳನ್ನು ಓದಿದಾಗ, ಇಷ್ಟು ವರ್ಷ ಸಾಹಿತ್ಯ ಕೃಷಿ ಮಾಡಿದ ತಮಗೂ ಗಜಲ್ ಬರೆಯಬೇಕೆಂಬ ಆಸೆ ಮೂಡುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಮಾತನಾಡಿ, ಪ್ರಾಚೀನ ನಾಗಾವಿ ಘಟಿಕ ಸ್ಥಾನದಿಂದಾಗಿ ಚಿತ್ತಾಪುರ ಪ್ರದೇಶವು ಐತಿಹಾಸಿಕ ಹಾಗೂ ಸಾಹಿತ್ಯಿಕ ಮಹತ್ವ ಹೊಂದಿದೆ. ಹಲವು ದಶಕಗಳಿಂದ ಇಲ್ಲಿ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳು ನಡೆಯುತ್ತಿವೆ. ಉಮೇಶ್ ಬಾಬು ರಚಿಸಿರುವ ಕವನ ಹಾಗೂ ಗಜಲ್‌ಗಳು ಪ್ರೌಢ ಸಾಹಿತ್ಯಿಕ ಗುಣಮಟ್ಟ ಹೊಂದಿವೆ ಎಂದು ಹೇಳಿದರು. ಸಾಹಿತಿ ಲಿಂಗಾರೆಡ್ಡಿ ಸೇಡಂ ಅವರು ಮೌನಡಂಗುರ ಕೃತಿಯ ಕುರಿತು ಮಾತನಾಡಿ, ಶೀರ್ಷಿಕೆಯ ಅರ್ಥಪೂರ್ಣತೆಯನ್ನು ವಿವರಿಸಿದರು. ಕವಿಯು ತಮ್ಮ ತಂದೆಗೆ ಅರ್ಪಿಸಿರುವ ಕವನದ ಭಾವತೀವ್ರತೆಯನ್ನು ಉಲ್ಲೇಖಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕವಿ, ಸಾಹಿತಿ ಹಾಗೂ ಪತ್ರಕರ್ತ ಮಹಿಪಾಲರೆಡ್ಡಿ ಮುನ್ನೂರು ಅವರು ಭಾವ ಬಂಧುರ ಮತ್ತು ಭಾವಭೃಂಗ ಗಜಲ್ ಸಂಕಲನಗಳನ್ನು ಪರಿಚಯಿಸಿದರು. ಸಾಮಾನ್ಯ ವ್ಯಕ್ತಿತ್ವದ ಚಿತ್ರಕಲಾವಿದನ ಆಂತರ್ಯದಲ್ಲಿ ಇಂತಹ ಅದ್ಭುತ ಕಾವ್ಯಪ್ರತಿಭೆ ಅಡಗಿರಬಹುದು ಎಂದು ಊಹಿಸುವುದೂ ಕಷ್ಟ. ಉಮೇಶ್ ಬಾಬು ಅತ್ಯುತ್ತಮ ಗಜಲ್‌ಗಳನ್ನು ರಚಿಸಿದ್ದಾರೆ ಎಂದು ಹೇಳಿ ಆಯ್ದ ಗಜಲ್‌ಗಳ ಭಾವಸೌಂದರ್ಯವನ್ನು ಸಭಿಕರಿಗೆ ಪರಿಚಯಿಸಿದರು.

ಈ ಸಂದರ್ಭದಲ್ಲಿ ಶರಣಬಸವೇಶ್ವರ ದೇವಸ್ಥಾನ ಸಮಿತಿಯ ಪದಾಧಿಕಾರಿ ಕೋಟೇಶ್ವರ ರೇಶ್ಮಿ ಅವರನ್ನು ಸನ್ಮಾನಿಸಲಾಯಿತು.

ಉಮೇಶ್ ಬಾಬು ಅವರ ಅಭಿಮಾನಿಗಳು ಕೂಡ ಅವರನ್ನು ಸತ್ಕರಿಸಿದರು. ಕಾರ್ಯಕ್ರಮದಲ್ಲಿ ದಿಗ್ಗಾವ್, ಮೊಗಲಾ, ಸಾತನೂರು ಸೇರಿದಂತೆ ವಿವಿಧ ಗ್ರಾಮಗಳ ಗಣ್ಯರು, ಹಿರಿಯ ಹಾಗೂ ಯುವ ಚಿತ್ರ-ಶಿಲ್ಪ ಕಲಾವಿದರು, ಸಾಹಿತಿಗಳು, ಹಿತೈಷಿಗಳು ಮತ್ತು ಲೇಖಕರ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ಒತ್ತಡದ ಬದುಕಿಗೆ ಯೋಗವೇ ಸಂಜೀವಿನಿ : ಸಂತೋಷ್ ಬಿ.ಜಿ ಪಾಟೀಲ್



ಭಾಲ್ಕಿ :

ದೈಹಿಕ ಆರೋಗ್ಯ, ಮಾನಸಿಕ ನೆಮ್ಮದಿ ಹಾಗೂ ಸಾತ್ವಿಕ ಜೀವನಕ್ಕೆ ಯೋಗವು ಪರಿಣಾಮಕಾರಿ ಮಾರ್ಗವಾಗಿದೆ. ಇಂದಿನ ಒತ್ತಡದ ಬದುಕಿನಲ್ಲಿ ನಿಯಮಿತ ಯೋಗಾಭ್ಯಾಸ ಆರೋಗ್ಯಕರ ಜೀವನಕ್ಕೆ ಸಂಜೀವಿನಿಯಂತೆ ನೆರವಾಗುತ್ತದೆ ಎಂದು ಜೈ ಗುರುದೇವ ಯೋಗ ಟ್ರಸ್ಟ್‌ನ ಅಧ್ಯಕ್ಷ ಸಂತೋಷ್ ಬಿ.ಜಿ. ಪಾಟೀಲ್ ಹೇಳಿದರು.

ಪಟ್ಟಣದ ದೇವಿನಗರದ ದೇವಿ ಮಂದಿರದಲ್ಲಿ ರವಿವಾರ ನಸುಕಿನ ಜಾವ 5 ಗಂಟೆಗೆ ನವರಾತ್ರಿ ಉತ್ಸವದ ಅಂಗವಾಗಿ ಪತಂಜಲಿ ಯೋಗ ಸಮಿತಿ, ಜೈ ಗುರುದೇವ ಯೋಗ ಟ್ರಸ್ಟ್ ಹಾಗೂ ನವರಾತ್ರಿ ಉತ್ಸವ ಸಮಿತಿಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಯೋಗ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ನಿತ್ಯ ಯೋಗಾಭ್ಯಾಸ ಮಾಡುವುದರಿಂದ ದೇಹ ಮತ್ತು ಮನಸ್ಸಿನ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ಸಾತ್ವಿಕ ಚಿಂತನೆ ಬೆಳೆಸಿಕೊಳ್ಳಬಹುದು ಎಂದರು.

ಪತಂಜಲಿ ಯೋಗ ಸಮಿತಿಯ ತಾಲೂಕು ಸಂಚಾಲಕ ಹರಿದೇವ ರುದ್ರಮುನಿ ಅವರು ಮಾತನಾಡಿ, ಪ್ರತಿದಿನ ಕನಿಷ್ಠ ಒಂದು ಗಂಟೆ ಆರೋಗ್ಯಕ್ಕಾಗಿ ಮೀಸಲಿಡಬೇಕು. ನಿಯಮಿತ ಯೋಗಾಭ್ಯಾಸ ದೇಹವನ್ನು ಸದೃಢವಾಗಿಸುವುದರ ಜೊತೆಗೆ ದಿನನಿತ್ಯದ ಕೆಲಸಗಳನ್ನು ಉತ್ಸಾಹದಿಂದ ನಿರ್ವಹಿಸಲು ಸಹಕಾರಿಯಾಗಿದೆ ಎಂದು ತಿಳಿಸಿದರು. ದೇವಸ್ಥಾನದ ಅಧ್ಯಕ್ಷ ದಿಲೀಪ್ ಢವಳೆ ಅವರು ಮಾತನಾಡಿ, ನವರಾತ್ರಿ ಉತ್ಸವದ ಅಂಗವಾಗಿ ಪ್ರತಿವರ್ಷ ಧಾರ್ಮಿಕ, ಸಾಮಾಜಿಕ ಹಾಗೂ ಆರೋಗ್ಯಪರ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಸಾರ್ವಜನಿಕರಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಉದ್ದೇಶದಿಂದ ಯೋಗ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ನುಡಿದರು. ಶಿಬಿರದಲ್ಲಿ ಯೋಗ ಶಿಕ್ಷಕ ಪಂಡಿತ್ ಪಾಟೀಲ್, ಚಂದ್ರಕಾಂತ್ ಹೈಬತಪುರೇ, ಮಂಗಲಾ ಕಾಡಾದೆ, ರಮೇಶ್ ಬರ್ಮಾ ಹಾಗೂ ಸಿಂಧೂ ಹರಿದೇವ್ ಅವರು ವಿವಿಧ ಯೋಗಾಸನ, ಪ್ರಾಣಾಯಾಮ ಮತ್ತು ಆರೋಗ್ಯಕರ ಜೀವನಶೈಲಿಯ ಕುರಿತು ಪ್ರಾಯೋಗಿಕವಾಗಿ ತರಬೇತಿ ನೀಡಿದರು. ನೂರಾರು ಜನರು ಶಿಬಿರದಲ್ಲಿ ಭಾಗವಹಿಸಿ ಯೋಗಾಭ್ಯಾಸದ ಪ್ರಯೋಜನ ಪಡೆದುಕೊಂಡರು. ಈ ಸಂದರ್ಭದಲ್ಲಿ ಸೂರ್ಯಕಾಂತ್ ಬಿರಾದಾರ್, ನೀಲಕಂಠ್ ಬಿರಾದಾರ್ ಸುರೇಶ್ ಕಾಳೆ, ಸೇರಿದಂತೆ ಯೋಗ ಸಮಿತಿ ಹಾಗೂ ನವರಾತ್ರಿ ಉತ್ಸವ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಚುನಾವಣಾ ಆಯೋಗದ ಹೊಣೆಗೇಡಿತನ; ಸುಪ್ರೀಂ ಕೋರ್ಟ್ ತರಾಟೆ

ದೇಶದಲ್ಲಿ ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆಗಳನ್ನು ನಡೆಸುವ ಹೊಣೆಗಾರಿಕೆಯನ್ನು ಹೊಂದಿರುವ ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗ ದಿನದಿಂದ ದಿನಕ್ಕೆ ತನ್ನ ನಂಬಿಕೆಯನ್ನು ಕಳೆದುಕೊಳ್ಳುತ್ತಿದೆ.ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆಯ (ಎಸ್‌ಐಆ‌ರ್) ಪ್ರಕ್ರಿಯೆಯ ಹೆಸರಿನಲ್ಲಿ ಬಹುದೊಡ್ಡ ಸಂಖ್ಯೆಯ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡುವ ಅದರ ಕಾರ್ಯ ವೈಖರಿ ಈಗಾಗಲೇ ಸಾಕಷ್ಟು ವಿವಾದ ಮತ್ತು ವಿರೋಧಕ್ಕೆ ಕಾರಣವಾಗಿದೆ. ಇದರ ಬೆನ್ನಲ್ಲೇ ಈಗ ಶೃಂಗೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಮತ ಎಣಿಕೆಯ ವೀಡಿಯೊ ದಾಖಲೆಗಳನ್ನು ಸುಪ್ರೀಂ ಕೋರ್ಟ್ ಗೆ ಸಲ್ಲಿಸಲು ಅದು ವಿಫಲವಾಗಿದೆ. ಇದು ಸಾಮಾನ್ಯ ವೈಫಲ್ಯವಲ್ಲ. ಇದರಿಂದ ಚುನಾವಣಾ ಆಯೋಗದ ಕಾರ್ಯ ದಕ್ಷತೆ, ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಯ ಬಗ್ಗೆ ಹಲವಾರು ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ. ಸಾರ್ವಜನಿಕರು ಆಯೋಗದ ಬಗ್ಗೆ ಸಂಶಯದಿಂದ ನೋಡುವಂತಾಗಿದೆ.



ಶೃಂಗೇರಿ ವಿಧಾನ ಸಭಾ ಕ್ಷೇತ್ರದಲ್ಲಿ 2023ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿ ಟಿ.ಡಿ. ರಾಜೇಗೌಡ ಅವರು ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ ಅವರನ್ನು 201 ಮತಗಳ ಅಂತರದಿಂದ ಸೋಲಿಸಿದ್ದರು. ಇದನ್ನು ಪ್ರಶ್ನಿಸಿ ಬಿಜೆಪಿ ಅಭ್ಯರ್ಥಿ ಜೀವರಾಜ ಅವರು ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಸದರಿ ಮತಕ್ಷೇತ್ರದಲ್ಲಿ ಅಂಚೆಯಲ್ಲಿ ಬಂದ ಮತಗಳ ಮರುಎಣಿಕೆಗೆ ಕರ್ನಾಟಕ ಹೈಕೋರ್ಟ್ ಆದೇಶ ನೀಡಿತ್ತು. ಈ ಆದೇಶದಂತೆ ಕಳೆದ ಮೇ ತಿಂಗಳಲ್ಲಿ ನಡೆದ ಅಂಚೆ ಮತಗಳ ಮರು ಎಣಿಕೆಯಲ್ಲಿ ಫಲಿತಾಂಶ ಬದಲಾಗಿತ್ತು. 52 ಮತಗಳ ಅಂತರದಿಂದ ಜೀವರಾಜ ಅವರ ಗೆಲುವನ್ನು ಘೋಷಿಸಲಾಗಿತ್ತು. ಆದರೆ ಆ ಫಲಿತಾಂಶವನ್ನು ರಾಜೇಗೌಡ ಅವರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿ ಮೂಲ ಮತ ಎಣಿಕೆಯ ಸಂದರ್ಭದಲ್ಲಿ ಅಮಾನ್ಯ ಎಂದು ಘೋಷಿಸಲಾಗಿದ್ದ 1,251 ಮತಗಳನ್ನು ಮರು ಪರಿಶೀಲನೆ ಮಾಡುವ ಮೂಲಕ ಚುನಾವಣಾಧಿಕಾರಿ ನ್ಯಾಯಾಲಯದ ನಿರ್ದೇಶನದ ವ್ಯಾಪ್ತಿಯನ್ನು ಮೀರಿದ್ದಾರೆ ಎಂದು ವಾದಿಸಿದ್ದರು. ಈ ಪ್ರಕರಣದಲ್ಲಿ ಅಂತಿಮ ತೀರ್ಪು ಪ್ರಕಟಗೊಳ್ಳುವವರೆಗೂ ರಾಜೇಗೌಡರು ಶಾಸಕರಾಗಿ ಮುಂದುವರಿಯಲು ಸುಪ್ರೀಂ ಕೋರ್ಟ್ ಅವಕಾಶ ಮಾಡಿ ಕೊಟ್ಟಿದೆ.

ಶೃಂಗೇರಿ ಮತಕ್ಷೇತ್ರದಲ್ಲಿ ಮೂಲ ಮತ ಎಣಿಕೆ ಸಂದರ್ಭದಲ್ಲಿ ಏನಾಯಿತು ಎಂಬುದನ್ನು ತಿಳಿಯಲು ವೀಡಿಯೊ ದೃಶ್ಯಗಳು ನೆರವಿಗೆ ಬರುವುದರಿಂದ ಅವುಗಳನ್ನು ಒದಗಿಸಲು ಸುಪ್ರೀಂ ಕೋರ್ಟ್ ಸೂಚನೆ ನೀಡಿತು. ಆದರೆ ವೀಡಿಯೊ ಸೇರಿದಂತೆ ಸಂಬಂಧಿಸಿದ ದಾಖಲೆಗಳು ತನ್ನ ಬಳಿ ಇಲ್ಲ ಚುನಾವಣಾ ಆಯೋಗ ಹೊಣೆ ಜಾರಿಸಿಕೊಂಡಿತು. ಈ ಹೊಣೆಗೇಡಿತನವನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂ ಕೋರ್ಟ್ ಚುನಾವಣೆ ನಡೆಸುವ ಸಂಸ್ಥೆಯೇ ತನ್ನ ದಾಖಲೆಗಳನ್ನು ಕಳೆದುಕೊಳ್ಳಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿ ಇಂಥ ನೆಪಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದು ಹೇಳಿ ಆಯೋಗದ ವಿವರಣೆಯನ್ನು ತಿರಸ್ಕರಿಸಿದೆ.

ವಾಸ್ತವವಾಗಿ ಚುನಾವಣಾ ಆಯೋಗದ ಮಾರ್ಗಸೂಚಿಗಳ ಪ್ರಕಾರ ಫಲಿತಾಂಶ ಪ್ರಕಟಗೊಂಡ 45 ದಿನಗಳ ವರೆಗೆ ಮತ ಎಣಿಕೆಗೆ ಸಂಬಂಧಿಸಿದ ವೀಡಿಯೊ ಮತ್ತು ಸಿಸಿಟಿವಿ ದಾಖಲೆಗಳನ್ನು ಸಂರಕ್ಷಿಸಬೇಕಾಗುತ್ತದೆ. ಚುನಾವಣಾ ಅರ್ಜಿ ಹಾಗೂ ಅದಕ್ಕೆ ಸಂಬಂಧಿಸಿದ ಕಾನೂನು ಪ್ರಕ್ರಿಯೆ ಬಾಕಿ ಇದ್ದಾಗ ವಿವಾದ ಇತ್ಯರ್ಥಗೊಳ್ಳುವವರೆಗೂ ಸಂಬಂಧಿಸಿದ ದಾಖಲೆಗಳನ್ನು ಉಳಿಸಿಕೊಳ್ಳುವುದು ಕಡ್ಡಾಯವಾಗಿದೆ. ಚುನಾವಣಾ ವಿವಾದ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವಾಗಲೇ ವೀಡಿಯೊ ದಾಖಲೆಗಳನ್ನು ಸಂರಕ್ಷಿಸಿಕೊಳ್ಳುವಲ್ಲಿ ವಿಫಲವಾಗಿರುವುದು ಚುನಾವಣಾ ಆಯೋಗದ ಗಂಭೀರ ನಿರ್ಲಕ್ಷ್ಯ ಹಾಗೂ ಸುರಕ್ಷತಾ ವ್ಯವಸ್ಥೆಯ ಸಂಪೂರ್ಣ ವೈಫಲ್ಯಕ್ಕೆ ಸಾಕ್ಷಿಯಾಗಿದೆ. ಚುನಾವಣಾ ಆಯೋಗ ತನ್ನ ನಿರ್ಲಕ್ಷ್ಯವನ್ನು ಸಮರ್ಥಿಸಿಕೊಳ್ಳುವುದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಚುನಾವಣಾ ಆಯೋಗ ವೀಡಿಯೊ ದೃಶ್ಯಾವಳಿಗಳನ್ನು ಒದಗಿಸದೇ ಹೋದಲ್ಲಿ ಪ್ರತಿಕೂಲ ತೀರ್ಮಾನಕ್ಕೆ ಬರಬೇಕಾಗುವುದೆಂದು ಸುಪ್ರೀಂ ಕೋರ್ಟ್ ನೀಡಿರುವ ಎಚ್ಚರಿಕೆ ಸೂಕ್ತವಾಗಿದೆ. ಆದರೆ ಎಚ್ಚರಿಕೆ ನೀಡಿದ ಮಾತ್ರಕ್ಕೆ ಸಾಂಸ್ಥಿಕ ವೈಫಲ್ಯಕ್ಕೆ ಪರಿಹಾರ ದೊರೆಯುವುದಿಲ್ಲ. ವೀಡಿಯೊ ದಾಖಲೆ ಹೇಗೆ ನಾಪತ್ತೆಯಾಯಿತು ಎಂಬುದನ್ನು ಪತ್ತೆ ಹಚ್ಚುವುದರ ಜೊತೆಗೆ ಆ ದಾಖಲೆಗಳನ್ನು ಸಂರಕ್ಷಿಸುವ ಹೊಣೆ ಹೊತ್ತಿದ್ದ ಅಧಿಕಾರಿಗಳನ್ನು ಗುರುತಿಸಿ ಅಂಥವರ ವಿರುದ್ಧ ಕಠಿಣ ಶಿಸ್ತು ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆ ನಡೆಸುವ ಹೊಣೆ ಹೊತ್ತಿರುವ ಸಂಸ್ಥೆಯಿಂದ ಇಂಥ ಅಪಚಾರವಾಗಬಾರದು.

ಚುನಾವಣಾ ಆಯೋಗದ ಈ ಹೊಣೆಗೇಡಿತನ ಆಡಳಿತಾತ್ಮಕ ಲೋಪ ಮಾತ್ರವಲ್ಲ, ಇದು ಇಡೀ ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆಗೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಸ್ವಾತಂತ್ರ್ಯಾನಂತರ ಸ್ವಾಯತ್ತ ಸಂಸ್ಥೆಯಾದ ಚುನಾವಣಾ ಆಯೋಗ ಹಿಂದೆಂದೂ ಇಂಥ ಅಪಖ್ಯಾತಿಗೆ ಗುರಿಯಾಗಿರಲಿಲ್ಲ. ಈ ಎಲ್ಲ ವಿದ್ಯಮಾನಗಳನ್ನು ಗಮನಿಸಿದರೆ ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಪ್ರಮುಖ ಪ್ರತಿಪಕ್ಷ ಗಳು, ಜನಪರ ಸಂಘಟನೆಗಳು ಆಗ್ರಹಿಸುತ್ತಿರುವುದು ಸೂಕ್ತವಾಗಿದೆ.

ದೇಶದ ಚುನಾವಣಾ ವ್ಯವಸ್ಥೆಯನ್ನೇ ಬುಡಮೇಲು ಮಾಡಿದ ಆರೋಪವಿರುವ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಈಗ ಉಳಿದ ಏಕೈಕ ಮಾರ್ಗವೆಂದರೆ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಡುವುದಾಗಿದೆ. ಚುನಾವಣಾ ಆಯೋಗಕ್ಕೆ ಅಂಟಿಕೊಂಡ ಮಸಿ ಅಳಿಸಿ ಹೋಗಬೇಕಾದರೆ ಜ್ಞಾನೇಶ್ ಕುಮಾರ್ ರಾಜೀನಾಮೆ ಕೊಡಲೇಬೇಕು. ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಯ ಜೊತೆಗೆ ಚುನಾವಣಾ ಆಯೋಗವನ್ನು ಸರಕಾರದ ಹಿಡಿತದಿಂದ ಮುಕ್ತಗೊಳಿಸಬೇಕಾಗಿದೆ.

ಲೋಕಸಭೆಯ ಬಲ 850ಕ್ಕೆ ಏರಿಕೆ: ಕಲಾಪದ ಸಮಯ ಹೆಚ್ಚಳವಿಲ್ಲದಿದ್ದರೆ ಸಂಸದರ ಧ್ವನಿ ಕ್ಷೀಣ!

ಲೋಕಸಭೆಯ ಸದಸ್ಯರ ಬಲವನ್ನು 550ರಿಂದ 850ಕ್ಕೆ ಹೆಚ್ಚಿಸುವ ಕ್ಷೇತ್ರ ಪುನರ್‌ವಿಂಗಡಣೆ ಮಸೂದೆ2026 ಸಂಸದೀಯ ಪ್ರಜಾಪ್ರಭುತ್ವದಲ್ಲಿ ಹೊಸ ಚರ್ಚೆ ಹುಟ್ಟುಹಾಕಿದೆ. ಜನಸಂಖ್ಯೆಗೆ ಅನುಗುಣವಾಗಿ ಸೀಟುಗಳ ಹೆಚ್ಚಳ ಅನಿವಾರ್ಯವಾದರೂ, ಸಂಸತ್ತಿನ ವಾರ್ಷಿಕ ಕಲಾಪದ ದಿನಗಳು ಮತ್ತು ಪ್ರಶ್ನೋತ್ತರ ಅವಧಿಯನ್ನು ವಿಸ್ತರಿಸದಿದ್ದರೆ ಸದನದಲ್ಲಿ ಜನಪ್ರತಿನಿಧಿಗಳ ಧ್ವನಿಯೇ ಕ್ಷೀಣಿಸುವ ಅಪಾಯವಿದೆ

ಭಾರತದ ಸಂಸದೀಯ ಪ್ರಜಾಪ್ರಭುತ್ವವು ಇಂದು ಐತಿಹಾಸಿಕ ತಿರುವೊಂದರಲ್ಲಿ ನಿಂತಿದೆ. ಕೇಂದ್ರ ಸರ್ಕಾರವು ಜಂಟಿಯಾಗಿ ಮಂಡಿಸಿರುವ ಸಂವಿಧಾನದ (131ನೇ ತಿದ್ದುಪಡಿ) ಮಸೂದೆ ಮತ್ತು ಕ್ಷೇತ್ರ ಪುನರ್‌ವಿಂಗಡಣೆ ಮಸೂದೆ2026 ಲೋಕಸಭೆಯ ಒಟ್ಟು ಸದಸ್ಯರ ಬಲವನ್ನು ಪ್ರಸ್ತುತ ಇರುವ 550ರಿಂದ 850ಕ್ಕೆ ಏರಿಸಲು ಪ್ರಸ್ತಾಪಿಸಿವೆ. ಮೇಲ್ನೋಟಕ್ಕೆ ಇದೊಂದು ಸರಳ ಪ್ರಜಾಸತ್ತಾತ್ಮಕ ಲೆಕ್ಕಾಚಾರದಂತೆ ಕಾಣುತ್ತದೆ; ಅಂದರೆ, ದೇಶದ ಜನಸಂಖ್ಯೆ ಹೆಚ್ಚಾದಂತೆ ಒಬ್ಬ ಸಂಸದರು ಪ್ರತಿನಿಧಿಸುವ ನಾಗರಿಕರ ಸಂಖ್ಯೆಯೂ ಏರಿಕೆಯಾಗಿದ್ದು, ಇದಕ್ಕೆ ಪರಿಹಾರವಾಗಿ ಸಂಸದರ ಸಂಖ್ಯೆಯನ್ನು ಹೆಚ್ಚಿಸುವುದು ಅನಿವಾರ್ಯ ಎನ್ನುವ ವಾದವಿದೆ. ಆದರೆ, ನೀತಿ ಸಂಶೋಧಕರಾದ ಅಥರ್ವ ದೇಶಮುಖ್ ಮತ್ತು ಮೆಹುಲ್ ಛಾಬ್ರಾ ಅವರು ದಿ ಹಿಂದೂ ಪತ್ರಿಕೆಯಲ್ಲಿ ವಿಶ್ಲೇಷಿಸಿರುವಂತೆ ಹಾಗೂ ಪಿಆರ್‌ಎಸ್ ಲೆಜಿಸ್ಲೇಟಿವ್ ರಿಸರ್ಚ್ ಸಂಸ್ಥೆಯ ಅಧ್ಯಯನಗಳು ಎಚ್ಚರಿಸಿರುವಂತೆ, ಸಂಸತ್ತಿನ ಕಾರ್ಯನಿರ್ವಹಣೆಯ ಅವಧಿಯನ್ನು ವಿಸ್ತರಿಸದೆ ಕೇವಲ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸುವುದು ಪ್ರಜಾಪ್ರಭುತ್ವದ ಆಶಯವನ್ನು ಪೂರ್ಣಗೊಳಿಸಲಾರದು.



ಭಾರತದಂತಹ ವೈವಿಧ್ಯಮಯ ಪ್ರಜಾಪ್ರಭುತ್ವದಲ್ಲಿ ಜನಪ್ರಾತಿನಿಧ್ಯವು ಕೇವಲ ಸದನದಲ್ಲಿ ಕುಳಿತುಕೊಳ್ಳುವ ಸಂಸದರ ಸಂಖ್ಯೆಗೆ ಸೀಮಿತವಾಗಿಲ್ಲ; ಬದಲಾಗಿ ಅದು ಎರಡು ಪ್ರಮುಖ ಸ್ತರಗಳಲ್ಲಿ ಕಾರ್ಯನಿರ್ವಹಿಸುತ್ತದೆ. ಮೊದಲನೆಯದು, ಮತದಾರರಿಗೆ ತಮ್ಮ ಸಂಸದರು ಎಷ್ಟರಮಟ್ಟಿಗೆ ಕೈಗೆಟುಕುತ್ತಾರೆ ಎಂಬುದು; ಎರಡನೆಯದು, ಆಯ್ಕೆಯಾದ ಸಂಸದರು ತಮ್ಮ ಕ್ಷೇತ್ರದ ಜನರ ಸಮಸ್ಯೆಗಳನ್ನು ಸದನದ ಒಳಗೆ ಮಂಡಿಸಲು ಎಷ್ಟು ಕಾಲಾವಕಾಶ ಮತ್ತು ಸಾಂಸ್ಥಿಕ ಅವಕಾಶವನ್ನು ಪಡೆಯುತ್ತಾರೆ ಎಂಬುದು. ಹೊಸ ಕ್ಷೇತ್ರ ಪುನರ್‌ವಿಂಗಡಣೆಯು ಸಂಸದರನ್ನು ಭೌಗೋಳಿಕವಾಗಿ ಮತದಾರರಿಗೆ ಹತ್ತಿರ ತರಬಹುದಾದರೂ, ಸದನದ ಕಾರ್ಯಕ್ಷಮತೆ ಮತ್ತು ಕಲಾಪದ ಸಮಯವನ್ನು ಹೆಚ್ಚಿಸದಿದ್ದರೆ ಸದನದೊಳಗೆ ಜನಪ್ರತಿನಿಧಿಗಳ ಧ್ವನಿಯೇ ಅಡಗಿಹೋಗುವ ಅಪಾಯವಿದೆ.

ಚುನಾವಣಾ ಆಯೋಗದ 2024ರ ಅಟ್ಲಾಸ್ (ಅಂಕಿಅಂಶಗಳ ಕೈಪಿಡಿ) ಪ್ರಕಾರ, ಭಾರತವು 543 ಲೋಕಸಭಾ ಕ್ಷೇತ್ರಗಳಲ್ಲಿ ಒಟ್ಟು 97.98 ಕೋಟಿ ನೋಂದಾಯಿತ ಮತದಾರರನ್ನು ಹೊಂದಿದೆ. ಅಂದರೆ, ಸರಾಸರಿ ಒಬ್ಬ ಸಂಸದರ ಮೇಲೆ ಸುಮಾರು 18 ಲಕ್ಷ ಮತದಾರರನ್ನು ಪ್ರತಿನಿಧಿಸುವ ಬೃಹತ್ ಹೊರೆಯಿದೆ. ಈ ಸರಾಸರಿಯ ಹಿಂದೆ ಕ್ಷೇತ್ರಗಳ ನಡುವಿನ ತೀವ್ರ ಅಸಮಾನತೆಯೂ ಅಡಗಿದೆ; ಉದಾಹರಣೆಗೆ, ತೆಲಂಗಾಣದ ಮಲ್ಕಾಜ್‌ಗಿರಿ ಲೋಕಸಭಾ ಕ್ಷೇತ್ರದಲ್ಲಿ ಬರೋಬ್ಬರಿ 37.8 ಲಕ್ಷ ಮತದಾರರಿದ್ದರೆ, ಲಕ್ಷದ್ವೀಪ ಕ್ಷೇತ್ರದಲ್ಲಿ ಕೇವಲ 57,953 ಮತದಾರರಿದ್ದಾರೆ. ಈ ಅಸಮಾನತೆಯು ಕ್ಷೇತ್ರಗಳ ಪುನರ್‌ರಚನೆಯ ತುರ್ತು ಅಗತ್ಯವನ್ನು ಸಾರಿ ಹೇಳುತ್ತದೆಯಾದರೂ, ಪ್ರಸ್ತುತ ಮಂಡಿಸಲಾಗಿರುವ 2026ರ ಯೋಜನೆಯು ಸಂಸತ್ತಿನ ಕಲಾಪದ ಸಾಮರ್ಥ್ಯವನ್ನು ಹೆಚ್ಚಿಸುವ ವಿಚಾರದಲ್ಲಿ ಸಂಪೂರ್ಣ ಜಾಣಕುರುಡು ಪ್ರದರ್ಶಿಸಿದೆ.

ಸಂಸತ್ತಿನ ಈ ಸಾಂಸ್ಥಿಕ ಸಾಮರ್ಥ್ಯದ ಕೊರತೆಯು ಒಂದು ದೊಡ್ಡ ರಚನಾತ್ಮಕ ಲೋಪವಾಗಿದೆ. ಸಂಸತ್ತಿನ ದೈನಂದಿನ ವೇಳಾಪಟ್ಟಿ ಮತ್ತು ವಾರ್ಷಿಕ ಅಧಿವೇಶನದ ದಿನಗಳನ್ನು ಯಥಾಸ್ಥಿತಿಯಲ್ಲಿ ಇರಿಸಿ, ಲೋಕಸಭೆಗೆ ಹೆಚ್ಚುವರಿಯಾಗಿ 300ಕ್ಕೂ ಹೆಚ್ಚು ಸದಸ್ಯರನ್ನು ಸೇರಿಸಿದರೆ ಸದನದಲ್ಲಿ ಸಮಯದ ಅಭಾವ ಮತ್ತಷ್ಟು ತೀವ್ರಗೊಳ್ಳಲಿದೆ. ಈಗಿರುವ ಲೋಕಸಭೆಯ ನಿಯಮಗಳ ಪ್ರಕಾರ, ಪ್ರಶ್ನೋತ್ತರ ಅವಧಿಯಲ್ಲಿ ( ) ಪ್ರತಿದಿನ ಮೌಖಿಕ ಉತ್ತರಕ್ಕಾಗಿ ಗರಿಷ್ಠ 20 ಚುಕ್ಕೆ ಗುರುತಿನ ಪ್ರಶ್ನೆಗಳನ್ನು ( ) ಮತ್ತು ಲಿಖಿತ ಉತ್ತರಕ್ಕಾಗಿ 230 ಚುಕ್ಕೆ ರಹಿತ ಪ್ರಶ್ನೆಗಳನ್ನು ( ) ಮಾತ್ರ ಆಯ್ಕೆ ಮಾಡಲಾಗುತ್ತದೆ. ಪ್ರತಿಯೊಬ್ಬ ಸಂಸದರು ದಿನಕ್ಕೆ ಗರಿಷ್ಠ ಐದು ಪ್ರಶ್ನೆಗಳನ್ನು ಸಲ್ಲಿಸಲು ಅವಕಾಶವಿದ್ದರೂ, ದೈನಂದಿನ ಲಾಟರಿ (ಬ್ಯಾಲೆಟ್) ಮೂಲಕ ಬೆರಳೆಣಿಕೆಯಷ್ಟು ಪ್ರಶ್ನೆಗಳಷ್ಟೇ ಆಯ್ಕೆಯಾಗುತ್ತವೆ. ಸದಸ್ಯರ ಸಂಖ್ಯೆ 850ಕ್ಕೆ ಏರಿಕೆಯಾದರೆ, ಸದನದಲ್ಲಿ ಸಚಿವರಿಂದ ನೇರವಾಗಿ ಮೌಖಿಕ ಉತ್ತರ ಪಡೆಯುವ ಸಂಸದರ ಸಾಧ್ಯತೆಯು ತೀರಾ ನಗಣ್ಯವಾಗಲಿದೆ.

ಇದಲ್ಲದೆ, ಲಭ್ಯವಿರುವ ಪ್ರಶ್ನೋತ್ತರ ಅವಧಿಯೂ ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬುದನ್ನು ಅಧಿಕೃತ ಅಂಕಿಅಂಶಗಳು ದೃಢಪಡಿಸುತ್ತವೆ. 17ನೇ ಲೋಕಸಭೆಯ ಅವಧಿಯಲ್ಲಿ ಪ್ರಶ್ನೋತ್ತರ ಕಲಾಪವು ತನಗೆ ನಿಗದಿಯಾಗಿದ್ದ ಸಮಯದ ಕೇವಲ ಶೇಕಡ 60ರಷ್ಟು ಮಾತ್ರ ಕಾರ್ಯನಿರ್ವಹಿಸಿತ್ತು. ಇನ್ನು ಪಿಆರ್‌ಎಸ್ ಲೆಜಿಸ್ಲೇಟಿವ್ ರಿಸರ್ಚ್ ಬಿಡುಗಡೆ ಮಾಡಿರುವ 2026ರ ಮುಂಗಾರು ಅಧಿವೇಶನದ (ಜುಲೈ 20ರಿಂದ ಆಗಸ್ಟ್ 13) ವರದಿಯ ಪ್ರಕಾರ, ಈ ಪರಿಸ್ಥಿತಿ ಮತ್ತಷ್ಟು ಶೋಚನೀಯವಾಗಿದೆ; ಇಡೀ ಮುಂಗಾರು ಅಧಿವೇಶನದಲ್ಲಿ ಲೋಕಸಭೆಯ ಪ್ರಶ್ನೋತ್ತರ ಅವಧಿಯು ನಿಗದಿತ ಸಮಯದ ಕೇವಲ ಶೇಕಡ 1ರಷ್ಟು, ಅಂದರೆ ಇಡೀ ಅಧಿವೇಶನದಲ್ಲಿ ಒಟ್ಟು ಕೇವಲ 9 ನಿಮಿಷಗಳ ಕಾಲ ಮಾತ್ರ ನಡೆದಿದೆ! ಇಂತಹ ತೀವ್ರ ಸಮಯದ ಅಭಾವವಿರುವ ಸದನಕ್ಕೆ ನೂರಾರು ಹೊಸ ಸದಸ್ಯರನ್ನು ಸೇರಿಸುವುದರಿಂದ ಕಾರ್ಯಾಂಗದ ಮೇಲಿನ ಶಾಸಕಾಂಗದ ಉತ್ತರದಾಯಿತ್ವವನ್ನು ಖಂಡಿತವಾಗಿಯೂ ಸುಧಾರಿಸಲು ಸಾಧ್ಯವಿಲ್ಲ.

ಕಲಾಪದ ಸಮಯದ ಕೊರತೆಯು ಸಂಸತ್ತಿನ ಇತರ ಮಹತ್ವದ ಪ್ರಕ್ರಿಯೆಗಳ ಮೇಲೂ ನೇರ ಹೊಡೆತ ನೀಡುತ್ತದೆ. ಸಂಸದರು ಯಾವುದೇ ಪೂರ್ವ ನೋಟಿಸ್ ನೀಡದೆ, ಪ್ರಾದೇಶಿಕ ಬೆಳೆ ನಷ್ಟ ಅಥವಾ ಪ್ರಕೃತಿ ವಿಕೋಪದ ಪರಿಹಾರದಂತಹ ಸಾರ್ವಜನಿಕ ತುರ್ತು ವಿಷಯಗಳನ್ನು ಪ್ರಸ್ತಾಪಿಸಲು ಶೂನ್ಯವೇಳೆಯನ್ನು ( ) ಬಳಸಿಕೊಳ್ಳುತ್ತಾರೆ. ಅದೇ ರೀತಿ, ಸಚಿವ ಸಂಪುಟದ ಭಾಗವಲ್ಲದ ಸಾಮಾನ್ಯ ಸಂಸದರು ತಮ್ಮದೇ ಆದ ಕಾನೂನು ಕರಡುಗಳನ್ನು ಮಂಡಿಸಲು ಖಾಸಗಿ ಸದಸ್ಯರ ಕಲಾಪ ( ) ಮಹತ್ವದ ವೇದಿಕೆಯಾಗಿದೆ. ಸದಸ್ಯರ ಸಂಖ್ಯೆ 850ಕ್ಕೆ ಹೆಚ್ಚಾದಾಗ ಈ ಅವಧಿಗಳನ್ನು ರಕ್ಷಿಸಿ ವಿಸ್ತರಿಸದಿದ್ದರೆ, ಇಂತಹ ಅತ್ಯಮೂಲ್ಯ ಸಂಸದೀಯ ಅಸ್ತ್ರಗಳು ತಮ್ಮ ಮೂಲ ಸತ್ವವನ್ನೇ ಕಳೆದುಕೊಳ್ಳಲಿವೆ.

ಲೋಕಸಭೆ ಸಂಸತ್ತು

ಮಸೂದೆಗಳ ಮೇಲಿನ ಚರ್ಚೆ ಮತ್ತು ವಾರ್ಷಿಕ ಬಜೆಟ್ ಅನುಮೋದನೆಯಲ್ಲೂ ಇದೇ ಬಗೆಯ ಕಾರ್ಯವಿಧಾನದ ಅಡಚಣೆಗಳು ಎದ್ದು ಕಾಣುತ್ತಿವೆ. 17ನೇ ಲೋಕಸಭೆಯ ಅವಧಿಯಲ್ಲಿ ಶೇಕಡ 35ರಷ್ಟು ಮಸೂದೆಗಳನ್ನು ಕೇವಲ ಒಂದು ಗಂಟೆಗಿಂತಲೂ ಕಡಿಮೆ ಅವಧಿಯ ಚರ್ಚೆಯೊಂದಿಗೆ ಅಂಗೀಕರಿಸಲಾಗಿದೆ. ಇನ್ನೂ ಆತಂಕಕಾರಿ ಸಂಗತಿಯೆಂದರೆ, ದೇಶದ ರಾಷ್ಟ್ರೀಯ ಬಜೆಟ್‌ನ ಶೇಕಡ 80ರಷ್ಟು ಭಾಗವನ್ನು ಯಾವುದೇ ಚರ್ಚೆಯಿಲ್ಲದೆ ನೇರವಾಗಿ ಮತಕ್ಕೆ ಹಾಕುವ ಗಿಲೋಟಿನ್ ಪ್ರಕ್ರಿಯೆಯ ( ) ಮೂಲಕ ಪಾಸು ಮಾಡಲಾಗಿದೆ. ಪಿಆರ್‌ಎಸ್ ಸಂಸ್ಥೆಯ 2026ರ ಏಪ್ರಿಲ್ ವರದಿಯು ಉಲ್ಲೇಖಿಸಿರುವಂತೆ, ಚರ್ಚೆಯ ಸಮಯವನ್ನು ಹೆಚ್ಚಿಸದೆ ಸದಸ್ಯರ ಸಂಖ್ಯೆಯನ್ನು ಮಾತ್ರ ಹೆಚ್ಚಿಸುವುದು ಶಾಸನಗಳ ಗುಣಮಟ್ಟದ ಪರಿಶೀಲನೆಯನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ.

ಈ ಸಾಂಸ್ಥಿಕ ಸವಾಲುಗಳ ಜೊತೆಗೆ, 2026ರ ಕ್ಷೇತ್ರ ಪುನರ್‌ವಿಂಗಡಣೆ ಮಸೂದೆಯು ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ನಡುವಿನ ಪ್ರಾತಿನಿಧ್ಯದ ಸಮತೋಲನ ಹಾಗೂ ರಾಜ್ಯಸಭೆಯ ಸಾಪೇಕ್ಷ ಪ್ರಭಾವದ ಕುರಿತೂ ಗಂಭೀರ ಚರ್ಚೆಗಳನ್ನು ಹುಟ್ಟುಹಾಕಿದೆ. ಈ ಹಿನ್ನೆಲೆಯಲ್ಲಿ ರಾಜಕೀಯ ವಲಯದಲ್ಲೂ ತೀವ್ರ ಕಳವಳ ವ್ಯಕ್ತವಾಗಿದ್ದು, 2026ರ ಅಕ್ಟೋಬರ್ ಮಧ್ಯಭಾಗದಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು, ಕ್ಷೇತ್ರ ಪುನರ್‌ವಿಂಗಡಣೆಯ ಪ್ರಸ್ತಾವಗಳನ್ನು ಅಂತಿಮಗೊಳಿಸುವ ಮುನ್ನ ಅಥವಾ ವಿಶೇಷ ಅಧಿವೇಶನ ಕರೆಯುವ ಮೊದಲು ಕೂಡಲೇ ಸರ್ವಪಕ್ಷಗಳ ಸಭೆ ಕರೆದು ಸಮಗ್ರ ಸಮಾಲೋಚನೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ. ಇದು ಈ ಮಸೂದೆಗಳ ಸುತ್ತ ಇರುವ ರಾಜಕೀಯ ಮತ್ತು ಸಾಂವಿಧಾನಿಕ ಸೂಕ್ಷ್ಮತೆಯನ್ನು ಎತ್ತಿ ತೋರಿಸುತ್ತದೆ.

ಜನಪ್ರತಿನಿಧಿಗಳ ಧ್ವನಿಯನ್ನು ರಕ್ಷಿಸಲು ಸಂಸತ್ತಿನ ಕಲಾಪದ ಸಮಯಕ್ಕೆ ಕಾನೂನಾತ್ಮಕ (ಶಾಸನಬದ್ಧ) ಸ್ಥಾನಮಾನ ನೀಡುವುದು ಇಂದಿನ ತುರ್ತು ಅಗತ್ಯವಾಗಿದೆ. ಸಂವಿಧಾನದ 85(1)ನೇ ವಿಧಿಯ ಪ್ರಕಾರ, ರಾಷ್ಟ್ರಪತಿಗಳು ತಮಗೆ ಸೂಕ್ತವೆನಿಸಿದ ಸಮಯ ಮತ್ತು ಸ್ಥಳದಲ್ಲಿ ಸಂಸತ್ತಿನ ಅಧಿವೇಶನವನ್ನು ಕರೆಯಬಹುದು ಹಾಗೂ ಎರಡು ಅಧಿವೇಶನಗಳ ನಡುವೆ ಆರು ತಿಂಗಳಿಗಿಂತ ಹೆಚ್ಚು ಅಂತರವಿರಬಾರದು ಎಂದಷ್ಟೇ ಹೇಳಲಾಗಿದೆ. ಈ ವಿಧಿಯನ್ನು ತಿದ್ದುಪಡಿ ಮಾಡಿ, ಸಂಸತ್ತಿನ ಕನಿಷ್ಠ ಕಡ್ಡಾಯ ಕಾರ್ಯದಿನಗಳ ನಿಯಮವನ್ನು ಸೇರಿಸಬೇಕಿದೆ. ಸಂವಿಧಾನದ ಕಾರ್ಯನಿರ್ವಹಣೆಯ ಪರಾಮರ್ಶೆಯ ರಾಷ್ಟ್ರೀಯ ಆಯೋಗವು () ಶಿಫಾರಸು ಮಾಡಿರುವಂತೆ, ಲೋಕಸಭೆಯು ವರ್ಷಕ್ಕೆ ಕನಿಷ್ಠ 120 ದಿನಗಳ ಕಾಲ ಕಡ್ಡಾಯವಾಗಿ ಕಲಾಪ ನಡೆಸುವಂತಾಗಬೇಕು.

ಇದರೊಂದಿಗೆ, ಪ್ರಶ್ನೋತ್ತರ ಅವಧಿ ಮತ್ತು ಶೂನ್ಯವೇಳೆಗೆ ಸಂರಕ್ಷಿತ ಸ್ಥಾನಮಾನ ನೀಡಬೇಕಿದ್ದು, ಸ್ಪೀಕರ್ ಅವರ ವಿವೇಚನೆಯ ಮೇರೆಗೆ ಅವುಗಳ ಸಮಯವನ್ನು ಕಡಿತಗೊಳಿಸಲು ಅಥವಾ ಬದಲಾಯಿಸಲು ಸಾಧ್ಯವಾಗದಂತೆ ಕಡ್ಡಾಯ ಸಮಯವನ್ನು ನಿಗದಿಪಡಿಸಬೇಕು. ಜೊತೆಗೆ, ಹೆಚ್ಚಳವಾಗುವ ಸದಸ್ಯರ ಬಲಕ್ಕೆ ಅನುಗುಣವಾಗಿ ಶಾಸನಾತ್ಮಕ ಪರಿಶೀಲನೆಯನ್ನು ಚುರುಕುಗೊಳಿಸಲು ಸಂಸದೀಯ ಸ್ಥಾಯಿ ಸಮಿತಿಗಳ ( ) ಸದಸ್ಯರ ಗರಿಷ್ಠ ಮಿತಿಯನ್ನು ಪ್ರಸ್ತುತ ಇರುವ 31ರಿಂದ ಮತ್ತಷ್ಟು ಹೆಚ್ಚಿಸಬೇಕು. ಒಟ್ಟಾರೆಯಾಗಿ, ಕ್ಷೇತ್ರ ಪುನರ್‌ವಿಂಗಡಣೆಯು ಭೂಪಟದಲ್ಲಿ ಕ್ಷೇತ್ರಗಳ ಗಡಿಗಳನ್ನು ಮರುರೂಪಿಸಬಹುದು; ಆದರೆ, ಆ ಕ್ಷೇತ್ರಗಳ ಜನರ ಧ್ವನಿಯು ಸಂಸತ್ತಿನೊಳಗೆ ಪರಿಣಾಮಕಾರಿಯಾಗಿ ಮೊಳಗುವಂತಾಗಲು ಸಮಗ್ರ ಸಂಸದೀಯ ಸುಧಾರಣೆಗಳು ಜಾರಿಯಾಗಲೇಬೇಕಿದೆ.

ಏನಿದು ಮಶೀನ್ ರೀಡಬಲ್ ಮತದಾರರ ಪಟ್ಟಿ? ಅದನ್ನು ಹಂಚಿಕೊಳ್ಳದೆ ಯಾಕೆ ಪ್ರತಿಪಕ್ಷಗಳ ವಂಚಿಸಿತ್ತು ಮೋಶಾ ಸರ್ಕಾರ?

17 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಗೆ ಚುನಾವಣಾ ಆಯೋಗ ಸೂಚಿಸಿದೆ. ವಿಪಕ್ಷಗಳ ವಿರೋಧಕ್ಕೆ ಮಣಿದು ಕೊನೆಗೂ ಓದಲು ಸಾಧ್ಯವಾಗುವ ಪ್ರತಿಗಳನ್ನು ರಾಜಕೀಯ ಪಕ್ಷಗಳಿಗೆ ಒದಗಿಸುವಂತೆ ನಿರ್ದೇಶಿಸಿದೆ. ಹಾಗಾದರೆ, ಇಲ್ಲಿವರೆಗೂ ಮತದಾರರ ಪಟ್ಟಿಯಲ್ಲಿ ನಕಲಿ ಹೆಸರುಗಳನ್ನು ತುರುಕಿ ಅಕ್ರಮ ಎಸಗಲಾಗುತ್ತಿತ್ತೇ? 'ಮಶೀನ್ ರೀಡಬಲ್' ಪಟ್ಟಿ ಕೇಳುತ್ತಿದ್ದ ವಿಪಕ್ಷಗಳಿಗೆ ಡಿಜಿಟಲ್ ಡೇಟಾ ನಿರಾಕರಿಸಿ 'ಮೋಶಾ' ಸರ್ಕಾರ ಮಾಡಿದ್ದೇನು? ಖಾಸಗಿತನದ ನೆಪವೊಡ್ಡಿ ವಿಪಕ್ಷಗಳ ಕಣ್ಣಿಗೆ ಮಣ್ಣೆರಚುತ್ತಿದ್ದ ಚುನಾವಣಾ ಆಯೋಗ ಕೊನೆಗೂ ಹೋರಾಟಕ್ಕೆ ಮಣಿದಿದ್ದೇಕೆ?

ಪ್ರಕ್ರಿಯೆಯನ್ನು ವಿರೋಧಿಸಿ ದೇಶಾದ್ಯಂತ ಪ್ರತಿಭಟನೆಗಳು ಹೆಚ್ಚಾದ ಬೆನ್ನಲ್ಲೇ, ಭಾರತೀಯ ಚುನಾವಣಾ ಆಯೋಗವು ಅಕ್ಟೋಬರ್ 15ರಂದು ನೀಡಿರುವ ಹೊಸ ನಿರ್ದೇಶನ ತೀವ್ರ ಸಂಚಲನ ಮೂಡಿಸಿದೆ. ಪಂಜಾಬ್, ಉತ್ತರ ಪ್ರದೇಶ ಮತ್ತು ಮಣಿಪುರ ಸೇರಿದಂತೆ ಒಟ್ಟು 17 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯನ್ನು ಮತ್ತೊಮ್ಮೆ ಪರಿಷ್ಕರಿಸಲು ಆಯೋಗ ಸೂಚನೆ ನೀಡಿದ್ದು, ವಿಶೇಷ ಸಂಕ್ಷಿಪ್ತ ಪರಿಷ್ಕರಣೆ () ಪ್ರಕ್ರಿಯೆಗೆ ಚಾಲನೆ ನೀಡಿದೆ. ಈ ಮಹತ್ವದ ಬೆಳವಣಿಗೆಯ ಬೆನ್ನಲ್ಲೇ, ಮತದಾರರ ಪಟ್ಟಿಯಲ್ಲಿ ನಡೆಯುವ ಅಕ್ರಮಗಳನ್ನು ತಡೆಯಲು ಯಂತ್ರ-ಓದಬಹುದಾದ (-) ಡಿಜಿಟಲ್ ಪಟ್ಟಿ ನೀಡಬೇಕೆಂಬ ಕಾಂಗ್ರೆಸ್ ಪಕ್ಷದ ಸುದೀರ್ಘ ಹೋರಾಟ ಹಾಗೂ ಬೇಡಿಕೆ ಮತ್ತೆ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿದೆ.

ಮತದಾರರ ಪಟ್ಟಿಯಲ್ಲಿ ಅಕ್ರಮವಾಗಿ ಹೆಸರುಗಳನ್ನು ಸೇರಿಸುವುದು ಹಾಗೂ ವಿಪಕ್ಷಗಳ ಬೆಂಬಲಿತ ಮತದಾರರ ಹೆಸರುಗಳನ್ನು ರಹಸ್ಯವಾಗಿ ಕೈಬಿಡುವುದನ್ನು ಸಾಕ್ಷಿ ಸಮೇತ ಪತ್ತೆಹಚ್ಚಲು ಮಿಷನ್-ರೀಡಬಲ್ ಪಟ್ಟಿ ಅತ್ಯಗತ್ಯ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಿರಂತರವಾಗಿ ಪ್ರತಿಪಾದಿಸುತ್ತಲೇ ಬಂದಿದ್ದರು. ಇದೀಗ ಚುನಾವಣಾ ಆಯೋಗದ ಹೊಸ ಆದೇಶದಲ್ಲಿ, ಪ್ರತಿಯೊಂದು ಮಾನ್ಯತೆ ಪಡೆದ ರಾಜಕೀಯ ಪಕ್ಷಕ್ಕೂ ಕರಡು ಹಾಗೂ ಅಂತಿಮ ಮತದಾರರ ಪಟ್ಟಿಯ ಎರಡು ಪ್ರತಿಗಳನ್ನು (ಒಂದು ಮುದ್ರಿತ ಹಾರ್ಡ್ ಕಾಪಿ ಮತ್ತು ಮತ್ತೊಂದು ಕಂಪ್ಯೂಟರ್ ಗ್ರಹಿಸಬಹುದಾದ ಸಾಫ್ಟ್ ಕಾಪಿ) ಉಚಿತವಾಗಿ ನೀಡಲೇಬೇಕು ಎಂದು ಕಡ್ಡಾಯಗೊಳಿಸಲಾಗಿದೆ.

ಸುಮಾರು ಎಂಟು ವರ್ಷಗಳಿಂದ ''ಖಾಸಗಿತನದ ರಕ್ಷಣೆ'' ಎಂಬ ನೆಪವೊಡ್ಡಿ ಮಿಷನ್-ರೀಡಬಲ್ ಪಟ್ಟಿ ನೀಡಲು ಹಟಮಾರಿ ಧೋರಣೆ ತಳೆದಿದ್ದ ಚುನಾವಣಾ ಆಯೋಗವು, ಕೊನೆಗೂ ವಿಪಕ್ಷಗಳ ತೀವ್ರ ಪ್ರತಿಭಟನೆ ಹಾಗೂ ಜನಾಗ್ರಹದ ಮುಂದೆ ಸೋಲೊಪ್ಪಿಕೊಂಡು ಮಂಡಿಯೂರಿದೆ ಎಂದು ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿದೆ. ಇಷ್ಟು ದಿನ ಆಡಳಿತಾರೂಢ ಮೋಶಾ ಸರ್ಕಾರದ ಕುಮ್ಮಕ್ಕಿನಿಂದ ವಿಪಕ್ಷಗಳ ಕಣ್ಣಿಗೆ ಮಣ್ಣೆರಚಿ, ಡಿಜಿಟಲ್ ಆಡಿಟ್‌ಗೆ ತಡೆ ಒಡ್ಡಲಾಗುತ್ತಿತ್ತು. ಆದರೆ ಈಗ ಆಯೋಗ ಹೊರಡಿಸಿರುವ ಈ ನಿರ್ದೇಶನವು ಪ್ರಜಾಪ್ರಭುತ್ವದ ಸುದೀರ್ಘ ತಾಂತ್ರಿಕ ಹೋರಾಟಕ್ಕೆ ಸಿಕ್ಕ ಬೃಹತ್ ಜಯ ಹಾಗೂ ಪ್ರತಿಪಕ್ಷಗಳ ವಾದಕ್ಕೆ ಸಿಕ್ಕ ಐತಿಹಾಸಿಕ ಮನ್ನಣೆಯಾಗಿದೆ ಎಂದು ಕಾಂಗ್ರೆಸ್ ಪ್ರತಿಪಾದಿಸಿದೆ.

ಮಶೀನ್ ರೀಡಬಲ್ ಅಥವಾ ಯಂತ್ರ-ಓದಬಹುದಾದ (-) ಮತದಾರರ ಪಟ್ಟಿ ಎಂದರೆ, ಕಂಪ್ಯೂಟರ್ ಸಾಫ್ಟ್‌ವೇರ್ ಅಥವಾ ಡಿಜಿಟಲ್ ಅಲ್ಗಾರಿದಮ್‌ಗಳ ಮೂಲಕ ಮತದಾರರ ಹೆಸರು, ವಿಳಾಸ ಹಾಗೂ ಇತರೆ ಸಂಪೂರ್ಣ ವಿವರಗಳನ್ನು ಸುಲಭವಾಗಿ ಹುಡುಕಲು (), ವಿಶ್ಲೇಷಿಸಲು ಮತ್ತು ಆಡಿಟ್ ಮಾಡಲು ಸಾಧ್ಯವಾಗುವ ಅತ್ಯಾಧುನಿಕ ಡಿಜಿಟಲ್ ಪಟ್ಟಿ. ಪ್ರಸ್ತುತ ಚುನಾವಣಾ ಆಯೋಗವು ಒದಗಿಸುತ್ತಿರುವ ಅನೇಕ ಮತದಾರರ ಪಟ್ಟಿಗಳು ಕೇವಲ ಮುದ್ರಿತ ಕಾಗದಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿದ ಚಿತ್ರ ಪಿಡಿಎಫ್ ( ) ರೂಪದಲ್ಲಿರುತ್ತವೆ. ಇಂತಹ ಚಿತ್ರರೂಪದ ಕಡತಗಳಲ್ಲಿ ನಿರ್ದಿಷ್ಟ ಹೆಸರನ್ನು ಹುಡುಕುವುದು ಕಷ್ಟವಾಗುವುದಲ್ಲದೆ, ಸಾವಿರಾರು ಪುಟಗಳ ಮಾಹಿತಿಯನ್ನು ಒಟ್ಟಾಗಿ ಸ್ವಯಂಚಾಲಿತವಾಗಿ ವಿಶ್ಲೇಷಿಸುವುದು ಅಸಾಧ್ಯದ ಮಾತಾಗುತ್ತದೆ.

ಆದರೆ, ಕರಾರುವಾಕ್ಕಾಗಿ ಪಠ್ಯ ರೂಪದಲ್ಲಿರುವ ಅಥವಾ ಆಪ್ಟಿಕಲ್ ಕ್ಯಾರೆಕ್ಟರ್ ರೆಕಗ್ನಿಷನ್ () ತಂತ್ರಜ್ಞಾನದ ಮೂಲಕ ಡಿಜಿಟಲ್ ಪಠ್ಯಕ್ಕೆ ಪರಿವರ್ತಿಸಲಾದ ರೀಡಬಲ್ ಪಟ್ಟಿಗಳಲ್ಲಿ ಪ್ರತಿ ಅಕ್ಷರವೂ ಕಂಪ್ಯೂಟರ್‌ಗೆ ಗ್ರಹಿಸಲು ಸಾಧ್ಯವಾಗುತ್ತದೆ. ಇದರಿಂದ ವಿವಿಧ ಮತಗಟ್ಟೆಗಳ ಪಟ್ಟಿಗಳನ್ನು ಕ್ಷಣಾರ್ಧದಲ್ಲಿ ಪರಸ್ಪರ ಹೋಲಿಕೆ ಮಾಡುವುದು, ಒಂದೇ ವ್ಯಕ್ತಿಯ ಹೆಸರು ಬೇರೆ ಬೇರೆ ಕಡೆಗಳಲ್ಲಿ ಪುನರಾವರ್ತನೆಯಾಗಿರುವುದನ್ನು () ಪತ್ತೆಹಚ್ಚುವುದು ಮತ್ತು ಮತದಾರರ ಪಟ್ಟಿಯಲ್ಲಿರುವ ಸಂಭಾವ್ಯ ಅಸಂಗತತೆಗಳು ಅಥವಾ ಲೋಪದೋಷಗಳನ್ನು ಅತ್ಯಂತ ನಿಖರವಾಗಿ ಪರಿಶೀಲಿಸುವುದು ಸಾಧ್ಯವಾಗುತ್ತದೆ.

ವಿಪಕ್ಷಗಳ ಕಳವಳಕ್ಕೆ ಕಾರಣವೇನು?

ಕಳೆದ ವರ್ಷ ಆಗಸ್ಟ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಮಹದೇವಪುರ ವಿಧಾನಸಭಾ ವಿಭಾಗದ ಮತದಾರರ ಪಟ್ಟಿಯಲ್ಲಿ ಬೃಹತ್ ಪ್ರಮಾಣದ ನಕಲಿ ಮತದಾರರ ಹೆಸರುಗಳನ್ನು ರಹಸ್ಯವಾಗಿ ಸೇರಿಸಲಾಗಿದೆ ಎಂದು ಸಾಕ್ಷಿ ಸಮೇತ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು. ಇಡೀ ದೇಶದಾದ್ಯಂತ ಮತದಾರರ ಪಟ್ಟಿಗಳಲ್ಲಿ ನಡೆಯುತ್ತಿರುವ ಇಂತಹ ಅಕ್ರಮ ಹಾಗೂ ಸಾಂಸ್ಥಿಕ ಲೋಪಗಳನ್ನು ಪತ್ತೆಹಚ್ಚಬೇಕಾದರೆ, ಚುನಾವಣಾ ಆಯೋಗವು ಎಲ್ಲಾ ಕ್ಷೇತ್ರಗಳ ಪಟ್ಟಿಗಳನ್ನು ಕಡ್ಡಾಯವಾಗಿ ಡಿಜಿಟಲ್ ಹಾಗೂ ಯಂತ್ರ-ಓದಬಹುದಾದ (-) ರೂಪದಲ್ಲೇ ನೀಡಬೇಕು ಎಂದು ಅವರು ಆಗ್ರಹಿಸುತ್ತಿದ್ದರು.

ಈ ಕುರಿತು ದಿ ಇಂಡಿಯನ್ ಎಕ್ಸ್ ಪ್ರೆಸ್ ಪತ್ರಿಕೆಯಲ್ಲಿ ಲೇಖನ ಬರೆದಿದ್ದ ಕಾಂಗ್ರೆಸ್ ವಕ್ತಾರ ಪವನ್ ಖೇರಾ, ''ದೇಶದಾದ್ಯಂತ ಮತದಾರರ ಪಟ್ಟಿಗಳ ನಿಖರತೆಯನ್ನು ಪಾರದರ್ಶಕವಾಗಿ ಆಡಿಟ್ ಮಾಡಲು ಇರುವ ಏಕೈಕ ಮಾರ್ಗವೆಂದರೆ ಈ ಪರಿಶೀಲನಾ ಪ್ರಕ್ರಿಯೆಯನ್ನು ಸಾಫ್ಟ್‌ವೇರ್ ಮೂಲಕ ಸ್ವಯಂಚಾಲಿತಗೊಳಿಸುವುದು (). ಮಶೀನ್ ರೀಡಬಲ್ ಪಟ್ಟಿಗಳು ಲಭ್ಯವಾದರೆ, ನಿಷ್ಪಕ್ಷಪಾತ ಕಂಪ್ಯೂಟರ್ ಪ್ರೋಗ್ರಾಂಗಳು ಕ್ಷಣಾರ್ಧದಲ್ಲಿ ಕ್ಷೇತ್ರದಿಂದ ಕ್ಷೇತ್ರಕ್ಕೆ ಮಾಹಿತಿಯನ್ನು ತುಲನೆ ಮಾಡಿ, ಪಟ್ಟಿಯ ಸತ್ಯಾಸತ್ಯತೆಯನ್ನು ಸಾರ್ವಜನಿಕವಾಗಿ ಬಯಲಿಗಿಡಬಲ್ಲವು'' ಎಂದು ಪ್ರತಿಪಾದಿಸಿದ್ದರು. ಪ್ರಸ್ತುತ ಆಯೋಗ ಒದಗಿಸುತ್ತಿರುವ ಕಾಗದದ ಸ್ಕ್ಯಾನ್ ಪ್ರತಿಗಳನ್ನು ( ) ಕೈಯಾರೆ () ಪರಿಶೀಲಿಸುವ ಹಳೆಯ ವಿಧಾನವು ಅತಿಯಾದ ಸಮಯ ಮತ್ತು ಶ್ರಮವನ್ನು ಬೇಡುತ್ತದೆ. ಇದರಿಂದಾಗಿ ಹಲವು ರಾಜ್ಯಗಳ ಸಾಲು ಸಾಲು ಕ್ಷೇತ್ರಗಳ ಮತದಾರರ ಪಟ್ಟಿಯನ್ನು ಆಡಿಟ್ ಮಾಡಲು ಬದ್ಧವಾಗಿದ್ದ ಕಾಂಗ್ರೆಸ್‌ನ ತಾಂತ್ರಿಕ ತಂಡವು, ಕೇವಲ ಒಂದು ಲೋಕಸಭಾ ಕ್ಷೇತ್ರದ ಒಂದೇ ಒಂದು ವಿಧಾನಸಭಾ ವಿಭಾಗದ ಪಟ್ಟಿಯನ್ನು ಪೂರ್ಣಗೊಳಿಸಲು ಬರೋಬ್ಬರಿ ಆರು ತಿಂಗಳು ಮತ್ತು ಸಾವಿರಾರು ಮಾನವ-ಗಂಟೆಗಳನ್ನು (-) ವ್ಯರ್ಥ ಮಾಡಬೇಕಾಯಿತು! ಆಡಳಿತಾರೂಢ ಮೋಶಾ ಸರ್ಕಾರವು ಈ ತಾಂತ್ರಿಕ ತೊಡಕನ್ನೇ ಅಸ್ತ್ರವಾಗಿಸಿಕೊಂಡು, ವಿಪಕ್ಷಗಳು ಅಕ್ರಮಗಳನ್ನು ಪತ್ತೆ ಮಾಡದಂತೆ ಡಿಜಿಟಲ್ ಡೇಟಾ ನಿರಾಕರಿಸಿ ವಂಚಿಸುತ್ತಿತ್ತು ಎಂಬುದು ಕಾಂಗ್ರೆಸ್‌ನ ಗಂಭೀರ ಆರೋಪ.

2018ರಲ್ಲಿ ಸುಪ್ರೀಂ ಕೋರ್ಟ್ ಕಾದಾಡಿದ್ದು ಯಾರ ಪರವಾಗಿ?

ಮತದಾರರ ಪಟ್ಟಿಯನ್ನು ಕಡ್ಡಾಯವಾಗಿ ಡಿಜಿಟಲ್ ಹಾಗೂ ಪಠ್ಯ ರೂಪದಲ್ಲಿ ( ) ಒದಗಿಸಬೇಕೆಂಬ ಪ್ರಮುಖ ಬೇಡಿಕೆಯು ಮೊದಲ ಬಾರಿಗೆ 2018ರಲ್ಲಿಯೂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಕಾಂಗ್ರೆಸ್‌ನ ಹಿರಿಯ ನಾಯಕರಾದ ಕಮಲ್ ನಾಥ್ ಮತ್ತು ಸಚಿನ್ ಪೈಲಟ್ ಸೇರಿದಂತೆ ಪ್ರಮುಖರು ಚುನಾವಣಾ ಪ್ರಕ್ರಿಯೆಯಲ್ಲಿನ ಗಂಭೀರ ಲೋಪಗಳು ಹಾಗೂ ಸಾಂಸ್ಥಿಕ ಕಾರ್ಯವಿಧಾನಗಳನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಆಗ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎ.ಕೆ. ಸಿಕ್ರಿ ಮತ್ತು ಅಶೋಕ್ ಭೂಷಣ್ ಅವರನ್ನೊಳಗೊಂಡ ದ್ವಿಸದಸ್ಯ ಪೀಠವು, ಅರ್ಜಿದಾರರ ಪರವಾದ ವಾದವನ್ನು ತಳ್ಳಿಹಾಕಿತ್ತು. ಚುನಾವಣಾ ಆಯೋಗವು ಅರ್ಜಿದಾರರಿಗೆ ಒದಗಿಸುತ್ತಿರುವ ಕರಡು ಮತದಾರರ ಪಟ್ಟಿಯ ಸ್ವರೂಪವು ಅಂದಿನ ಚುನಾವಣಾ ಕೈಪಿಡಿಯಲ್ಲಿನ ( ) ನಿಯಮಗಳಿಗೆ ಸಂಪೂರ್ಣವಾಗಿ ಬದ್ಧವಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತ್ತು. ಅಂದರೆ, ಕರಡು ಪಟ್ಟಿಯನ್ನು ಮುಖ್ಯ ಚುನಾವಣಾ ಅಧಿಕಾರಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪಠ್ಯ ರೂಪದಲ್ಲಿ ಪ್ರಕಟಿಸಬೇಕು ಎಂಬ ನಿಯಮವಿದ್ದರೂ ಸಹ, ಅದನ್ನು ಕಡ್ಡಾಯವಾಗಿ ಡಿಜಿಟಲ್ ಹುಡುಕಬಹುದಾದ ( ) ರೂಪದಲ್ಲೇ ನೀಡಬೇಕು ಎಂದು ಯಾವುದೇ ನಿಯಮದಲ್ಲಿ ಹೇಳಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿತ್ತು.

ಕೋಟ್ಯಂತರ ಮತದಾರರ ವೈಯಕ್ತಿಕ ಮಾಹಿತಿಯ ಗೌಪ್ಯತೆ ಮತ್ತು ರಕ್ಷಣೆಯನ್ನು ( ) ದೃಷ್ಟಿಯಲ್ಲಿಟ್ಟುಕೊಂಡು, ರಾಜಕೀಯ ಪಕ್ಷಗಳಿಗೆ ಸ್ಕ್ಯಾನ್ ಮಾಡಬಹುದಾದ ಪಠ್ಯ ರೂಪದಲ್ಲಿ ಅಥವಾ ನೇರ ಡಿಜಿಟಲ್ ಡೇಟಾವನ್ನು ನೀಡುವುದಿಲ್ಲ ಎಂದು ಇಸಿಐ ತಿಳಿಸಿತ್ತು. ಆಯೋಗದ ಈ ವಾದವನ್ನು ಪುಷ್ಟೀಕರಿಸಿದ್ದ ಸುಪ್ರೀಂ ಕೋರ್ಟ್, ಒಂದು ವೇಳೆ ಅರ್ಜಿದಾರರಿಗೆ ಬೇಕಿದ್ದರೆ, ಅವರು ತಮ್ಮದೇ ಆದ ತಾಂತ್ರಿಕ ಪ್ರಯತ್ನ ಮತ್ತು ಶ್ರಮವನ್ನು ಹಾಕಿ ಆ ಪಟ್ಟಿಯನ್ನು ಪರಿವರ್ತಿಸಿಕೊಳ್ಳಬಹುದೇ ಹೊರತು, ಅದನ್ನು ಆಯೋಗದಿಂದ ಹಕ್ಕಾಗಿ ಪಡೆಯಲು ಕಾನೂನಿನಲ್ಲಿ ಅವಕಾಶವಿಲ್ಲ ಎಂದು ತೀರ್ಪು ನೀಡಿತ್ತು.

2025ರಲ್ಲಿ ಮತ್ತೆ ಮುನ್ನೆಲೆಗೆ ಬಂದಿದ್ದ ವಿವಾದ

2025ರಲ್ಲಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ () ಸೇರಿದಂತೆ ಹಲವು ಅರ್ಜಿದಾರರು ಪ್ರಕ್ರಿಯೆಯ ಸಿಂಧುತ್ವವನ್ನು ಪ್ರಶ್ನಿಸಿದಾಗ, 2003ರ ಮತದಾರರ ಪಟ್ಟಿಯನ್ನು ಯಂತ್ರ-ಓದಬಹುದಾದ ರೂಪದಲ್ಲಿ ನೀಡದಿರುವ ವಿಚಾರ ಮತ್ತೆ ಚರ್ಚೆಗೆ ಬಂದಿತ್ತು. ಈ ಸಂದರ್ಭದಲ್ಲಿ ಮತದಾರರ ವೈಯಕ್ತಿಕ ಮಾಹಿತಿಯ ಗೌಪ್ಯತೆ ಮತ್ತು ದೊಡ್ಡ ಪ್ರಮಾಣದ ದತ್ತಾಂಶವನ್ನು ವಿಶ್ಲೇಷಿಸುವುದರಿಂದ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿತ್ತು. ದತ್ತಾಂಶವನ್ನು ವ್ಯಾಪಕವಾಗಿ ಬಳಸುವುದರಿಂದ ವ್ಯಕ್ತಿಗಳ ಗೌಪ್ಯತೆ ಹಾಗೂ ಭಾರತೀಯ ನಾಗರಿಕರ ಮಾಹಿತಿಯ ರಕ್ಷಣೆಗೆ ಸಂಬಂಧಿಸಿದ ಪ್ರಶ್ನೆಗಳು ಉದ್ಭವಿಸುತ್ತವೆ ಎಂದು ನ್ಯಾಯಮೂರ್ತಿ ಜಾಯ್ಮಲ್ಯ ಬಾಗ್ಚಿ ಅಭಿಪ್ರಾಯಪಟ್ಟಿದ್ದರು.

ವರ್ಷಗಳಿಂದಲೂ ಮುಂದಿಡುತ್ತಿರುವ ವಿಪಕ್ಷಗಳ ಬೇಡಿಕೆಯನ್ನು ನರೇಂದ್ರ ಮೋದಿ ಮತ್ತು ಅಮಿತ್ ಶಾ ನೇತೃತ್ವದ ಸರ್ಕಾರ ತಳ್ಳಿಹಾಕಿತ್ತು. ಸರ್ಕಾರದ ಪರೋಕ್ಷ ನಿಯಂತ್ರಣ ಹಾಗೂ ಪ್ರಭಾವದಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಚುನಾವಣಾ ಆಯೋಗವು, ವಿಪಕ್ಷಗಳ ಈ ನ್ಯಾಯಯುತ ಬೇಡಿಕೆಯನ್ನು ಸತತವಾಗಿ ತಿರಸ್ಕರಿಸುತ್ತಾ ಬಂದಿತ್ತು. ಶೋಧಿಸಬಹುದಾದ () ಪಟ್ಟಿಯನ್ನು ನೀಡಲು ನಿರಾಕರಿಸಲು ಆಯೋಗ ಮುಂದಿಟ್ಟಿದ್ದ ಏಕೈಕ ಕಾರಣ, ಮತದಾರರ ಖಾಸಗಿತನದ ರಕ್ಷಣೆ ( ). ಈ ಕಾರಣವನ್ನು ಮುಂದಿಟ್ಟುಕೊಂಡು, ಆಯೋಗವು ಡಿಜಿಟಲ್ ರೂಪದ ಡೇಟಾವನ್ನು ರಾಜಕೀಯ ಪಕ್ಷಗಳಿಗೆ ಹಂಚಿಕೊಳ್ಳಲು ಹಿಂದೇಟು ಹಾಕಿತ್ತು. ಆದರೆ, ಆಯೋಗದ ಈ ವಾದವೇ ಮತ್ತಷ್ಟು ಅನುಮಾನಗಳಿಗೆ ಕಾರಣವಾಯಿತು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR